# CBSE
# 05. CODE NO. 115
# CLASS XII KANNADA
# 2022 –2023
# MODEL QUESTION PAPER

**One Paper 3 Hours Max. Marks : 80**

**ತರಗತಿ : 12** **ಸಿಬಿಎಸ್‌ಇ** **ವಿಷಯ : ಕನ್ನಡ**

2022 – 2023

**ಮಾದರಿ ಪ್ರಶ್ನೆಪತ್ರಿಕೆ**

**ಒಂದು ಪತ್ರಿಕೆ** **ಸಮಯ : 3 ಗಂಟೆ** **ಅಂಕಗಳು : 80**

**ಸೂಚನೆಗಳು :**

- **ಪ್ರಶ್ನೆ ಪತ್ರಿಕೆಯು A & B ಭಾಗಗಳನ್ನು ಮತ್ತು A, B, C ಮತ್ತು D ಎಂಬ 4 ವಿಭಾಗಳನ್ನು ಒಳಗೊಂಡಿರುತ್ತದೆ. A ಭಾಗದಲ್ಲಿ ಒಟ್ಟು 53 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಕೇವಲ 40 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.**
- **ಭಾಗ– A,ಯ ವಿಭಾಗ A ದಲ್ಲಿ ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ 4 ಗದ್ಯಾಂಶಗಳನ್ನು ಕೊಡಲಾಗಿದೆ. ಅವುಗಳಲ್ಲಿ ಯಾವುದಾದರೂ 2 ಗದ್ಯಾಂಶಗಳನ್ನು ಮಾತ್ರ ಆರಿಸಿಕೊಂಡು 10 ಪ್ರಶ್ನೆಗಳಿಗೆ ಉತ್ತರಿಸಬೇಕು. ಒಂದೊಂದು ಗದ್ಯದಲ್ಲಿ 1 ಅಥವಾ 2 ಹೀಗೆ ಉತ್ತರಗಳನ್ನು ಬರೆಯದೆ ಒಂದು ಪೂರ್ಣ ಗದ್ಯವನ್ನೇ ಆಯ್ಕೆ ಮಾಡಿಕೊಂಡು, ಅದರಲ್ಲಿರುವ 5 ಪ್ರಶ್ನೆಗಳಿಗೆ ಉತ್ತರಿಸಬೇಕು.**
- **ವಿಭಾಗ – B, ಅನ್ವಯಿಕ ವ್ಯಾಕರಣ ವಿಭಾಗದಲ್ಲಿ ಕೊಟ್ಟಿರುವ 19 ಪ್ರಶ್ನೆಗಳಲ್ಲಿ 16 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.**
- **ವಿಭಾಗ - C ದಲ್ಲಿಯ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕು.**
- **ಭಾಗ - B ದ ವಿಭಾಗ - D ದಲ್ಲಿಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.**

## PART A Section A

**ವಾಚನ ಮತ್ತು ಗ್ರಹಿಕಾ ಕೌಶಲ : ಅಪರಿಚಿತ ಗದ್ಯ ಅಂಕಗಳು - 10**

**ಪ್ರಶ್ನೆ I. ಈ ಕೆಳಗೆ ಎರಡು ಪರಿಚ್ಛೇದಗಳನ್ನು ಕೊಡಲಾಗಿದೆ. ಅವುಗಳನ್ನು ಓದಿಕೊಂಡು ಯಾವುದಾದರೂ ಒಂದು ಪರಿಚ್ಛೇದದ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 X 5 = 5**

ಸಾಮಾನ್ಯವಾಗಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಆವಿಷ್ಕಾರಗಳ ಮತ್ತು ಬದಲಾವಣೆಗಳ ಪರಿಚಯ ಕಾರ್ಮಿಕನಿಗೆ ಆಗುವುದಿಲ್ಲ. ನಮ್ಮ ವ್ಯವಸ್ಥೆ ಇರುವದೇ ಹೀಗೆ. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ. ಅವರು ಮಾತ್ರ ಅದರ ಬಗ್ಗೆ ಆಲೋಚಿಸುತ್ತಾರೆ. ಅವರು ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ. ಅದಕ್ಕಿಂತ ಹೆಚ್ಚು ಯೋಚಿಸಲು ಅವನಿಗೆ ಸಾಧ್ಯವಿಲ್ಲ. ಏಕೆಂದರೆ ಆ ಒಂದು ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ. ಇದು ಹೀಗೇ ಮುಂದುವರಿಯುತ್ತಿರುವುದರ ಅರ್ಥವೇನು? ಕೆಲಸ ಮಾಡುತ್ತಾ ಹೋದಂತೆ ಕಾರ್ಮಿಕನ ತಿಳುವಳಿಕೆ ಜಾಸ್ತಿಯಾಗುತ್ತಾ ಹೋಗುತ್ತದೆ. ಅವನಿಗೆ ಪೂರಕವಾದ ಸಾಹಿತ್ಯವನ್ನೂ ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗುತ್ತದೆ. ಇದರ ನೆರವಿನಿಂದ ಆತ ಕಾರ್ಯವಿಧಾನದಲ್ಲಿ ಕೆಲವೇ ಬದಲಾವಣೆಗಳನ್ನು ಮಾಡಿಕೊಂಡು ಇನ್ನೂ ಉತ್ತಮ ಗುಣಮಟ್ಟದಲ್ಲಿ ವಸ್ತುವನ್ನು ಉತ್ಪಾದಿಸಬಹುದು ಅಥವಾ ಉತ್ಪಾದನೆಯ ವೆಚ್ಚವನ್ನು ತಗ್ಗಿಸುವಂತಹ ಉಪಯುಕ್ತ ಸಲಹೆಯನ್ನೂ ಕೊಡಬಹುದು. ಒಟ್ಟಿನಲ್ಲಿ ಕಾರ್ಮಿಕನ ಈ ಅನುಭವ ಜ್ಞಾನದ ಬಳಕೆಗೆ ಇರುವ ಬಹುದೊಡ್ಡ ತೊಡಕೆಂದರೆ ವಿದೇಶೀ ಭಾಷೆಯೊಂದರ ಮಾಧ್ಯಮದ ಮೂಲಕ ನಮ್ಮ ವ್ಯವಹಾರಗಳೆಲ್ಲವೂ ನಡೆಯುತ್ತಿರುವುದು. ನಾವು ಬದಲಾಗಬೇಕಾದರೆ ಮೊದಲು ಈ ಭಾಷಾ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ. ಹಾಗಿದ್ದಾಗ ಮಾತ್ರ ನಮ್ಮ ನೆಲ, ನಮ್ಮ ನೆಲಕ್ಕೆ ಒಗ್ಗುವಂತೆ ತಂತ್ರಜ್ಞಾನ ಕೇತ್ರದಲ್ಲಿ ನಮಗೆ ಅಗತ್ಯವಿರುವಂಥವುಗಳನ್ನು ನಾವೇ ಸಿದ್ಧಪಡಿಸಿಕೊಂಡು ಸ್ವಾವಲಂಬಿಗಳಾಗಬಹುದು.

**ಪ್ರಶ್ನೆಗಳು :**

1. **ತಂತ್ರಜ್ಞಾನದಲ್ಲಿ ಉಂಟಾಗುವ ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಸಾಮಾನ್ಯವಾಗಿ ಏಕೆ ಉಂಟಾಗದು?**

   a. ತನ್ನ ಕೆಲಸಕ್ಕಿಂತ ಹೆಚ್ಚು ಯೋಚಿಸಲು ಅವನಿಗೆ ಸಾಧ್ಯವಿಲ್ಲ.

   b. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.

c. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

d. ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಅಗತ್ಯವೆಂದು ಯಾರಿಗೂ ಅನಿಸುತ್ತಿಲ್ಲ.

2. **ತಜ್ಞರು ಹೇಳಿದಷ್ಟನ್ನೆ ಕಾರ್ಮಿಕ ಮಾಡಲು ಕಾರಣವೇನು?**

a. ಅವನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುತ್ತಿಲ್ಲ.

b. ಕಾರ್ಮಿಕನಿಗೆ ಅದರಲ್ಲಿ ಆಸಕ್ತಿಯಿಲ್ಲ.

c. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

d. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.

3. **ತಂತ್ರಜ್ಞಾನದ ಬದಲಾವಣೆ ಕಾರ್ಮಿಕನಿಗೆ ಏಕೆ ತಿಳಿಯುವುದಿಲ್ಲ?**

a. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

b. ನಮ್ಮ ವ್ಯವಸ್ಥೆ ಇರುವುದೇ ಹೀಗೆ.

c. ಏಕೆಂದರೆ ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ.

d. ತಜ್ಞರು ತಿಳಿಸಿಕೊಟ್ಟಿರುವುದಿಲ್ಲ.

4. **ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಕಾರ್ಮಿಕನಿಗೆ ಹೇಗೆ ನೆರವಾಗಬಹುದು?**

a. ಕೆಲಸ ಮಾಡುತ್ತಾ ಹೋದಂತೆ ಕಾರ್ಮಿಕನ ತಿಳುವಳಿಕೆ ಜಾಸ್ತಿಯಾಗುತ್ತಾ ಹೋಗುತ್ತದೆ.

b. ಕಾರ್ಮಿಕನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುಕೂಲವಾಗುತ್ತದೆ.

c. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ಕಾರ್ಮಿಕನಿಗೆ ಕೊಡಬಹುದು.

d. ತಜ್ಞರೇ ಕಾರ್ಮಿಕನ ಕೆಲಸ ಮಾಡಿಕೊಟ್ಟು ನೆರವಾಗಬಹುದು.

5. **ವಿದೇಶ ಭಾಷೆಯ ಬಳಕೆಯಿಂದ ಕಾರ್ಮಿಕನಿಗಾಗುವ ತೊಂದರೆಯೇನು?**

a. ಕಾರ್ಮಿಕ ವಿದೇಶೀ ಭಾಷೆಯನ್ನು ಕಲಿಯಬಹುದು.

b. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವದಿಲ್ಲ.

c. ತಜ್ಞರು ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ.

d. ಕಾರ್ಮಿಕನಿಗೆ ತನ್ನ ಉದ್ಯೋಗವನ್ನು ಏಕಾಗ್ರತೆ ಮತ್ತು ಶ್ರದ್ಧೆಯಿಂದ ಮಾಡಲು ಆಗುವುದಿಲ್ಲ.

**ಅಥವಾ**

ಅರುಣೋದಯ ಸಾಹಿತ್ಯವು ಎಂದಿನಿಂದ ಮೊದಲಾಯಿತು? ಒಂದೇ ಮಾತಿನಲ್ಲಿ ಹೇಳುವುದಾದರೆ ಪಾಶ್ಚಾತ್ಯದ ಸಂಪರ್ಕದ ಪರಿಣಾಮವಾಗಿ ಮಧ್ಯಯುಗೀನ ಪಾಳೆಯಗಾರಿಕಾ ಪದ್ಧತಿ ಹೊರಟುಹೋಯಿತು. ಮತಧರ್ಮಗಳ ಕಟ್ಟುಪಾಡಿನಲ್ಲಿದ್ದ ನಮ್ಮ ಜೀವನಕ್ರಮವು ಅದುವರೆಗೆ ಸಮಷ್ಟಿಯಾಗಿತ್ತು. ಈಗ ಲೌಕಿಕ ದೃಷ್ಟಿ ಮೇಲ್ವಾಯ್ದು ಬಂದು ಹೆಚ್ಚೆಚ್ಚು ವ್ಯಕ್ತಿಗತವಾಯಿತು. ಪಾಶ್ಚಾತ್ಯ ಪ್ರಣಾಲಿಯಿಂದಾಗಿ ನಮ್ಮಲ್ಲಿ ಜಿಜ್ಞಾಸಾ ಪ್ರವೃತ್ತಿಯಲ್ಲಿ ನವೀನ ಸಮಾಜ ನಿರ್ಮಿತಿಯ ಹಂಬಲವೂ ತಲೆದೋರಿದವು. ಇಂತಹ ಪ್ರಗತಿಪರ ಮನೋಧರ್ಮವನ್ನಿಟ್ಟುಕೊಂಡು ರಾಜಾರಾಮ ಮೋಹನರಾಯ್, ವೀರೇಶಲಿಂಗಂ ಪಂತುಲು, ಅಗರಕರ, ತಿಳಕ ಮುಂತಾದ ಸುಧಾರಣಾವಾದಿಗಳು ಕಾರ್ಯಪ್ರವೃತ್ತರಾದರು. ಅದರ ಪಡಿನೆಳಲು ಸಾಹಿತ್ಯದಲ್ಲಿಯೂ ಕಂಡುಬಂದಿತು. ಮತ್ತೆ ಈ ಹೊಸತನವು ನಮ್ಮ ದೇಶದ ಎಲ್ಲ ಭಾಷೆಗಳಲ್ಲಿಯೂ ಏಕಕಾಲಕ್ಕೆ ಅಂದರೆ ಹತ್ತೊಂಬತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡಿತು. ಪಾಶ್ಚಾತ್ಯ ಸಂಪರ್ಕವೇ ಹಾಗೆ ಏಕಪ್ರಕಾರವಾಗಿದ್ದಿತಲ್ಲವೇ? ಅದೇ ಕಾರಣದಿಂದ ನಾನಾ ಭಾಷಾ–ಸಾಹಿತ್ಯಗಳ ಸ್ವರೂಪವೂ ಬಹುಮಟ್ಟಿಗೆ ಸಮಾನ ಲಕ್ಷಣದಿಂದ ಕೂಡಿದ್ದಾಯಿತು. ಒಟ್ಟಾರೆ ನೋಡುವುದಾದರೆ ಪಾಶ್ಚಾತ್ಯರ ಆಗಮನ ನಮ್ಮ ದೇಶದಲ್ಲಿ ಕೇವಲ ಸಾಮಾಜಿಕ ಬದಲಾವಣೆಗೆ ಮಾತ್ರ ಕಾರಣವಾಗಿರದೆ ಸಾಹಿತ್ತಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳಿಗೂ ಕಾರಣವಾಗಿದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇದರ ಪರಿಣಾಮದಿಂದಾಗಿಯೇ ಸಮಾನತೆಯ ಸಿರಿಬೆಳಕು ಎಲ್ಲ ಕಡೆಗೂ ಪಸರಿಸಿ ಜನರಲ್ಲಿ ಸ್ವಾತಂತ್ರ್ಯದ ಹಂಬಲವನ್ನು ಹುಟ್ಟುಹಾಕಿತು. ನಮ್ಮ ಸಮಾಜ ಸುಧಾರಕರು ಅದಕ್ಕೆ ಸ್ಪಷ್ಟವಾದ ರೂಪುರೇಷೆಗಳನ್ನು ಹಾಕಿಕೊಟ್ಟು ನವೀನತೆಯ ಗಾಳಿ ದೇಶದ ತುಂಬೆಲ್ಲ ವ್ಯಾಪಿಸಲು ಕಾರಣಕರ್ತರಾದರು.

**ಪ್ರಶ್ನೆಗಳು :**

1. **ಅರುಣೋದಯ ಸಾಹಿತ್ಯದ ಉದಯಕ್ಕೆ ಕಾರಣವೇನು?**

a. ಪಾಶ್ಚಾತ್ಯದ ಸಂಪರ್ಕದ ಪರಿಣಾಮ

b. ಮಧ್ಯಯುಗೀನ ಪಾಳೆಯಗಾರಿಕಾ ಪದ್ಧತಿ

c. ಮತಧರ್ಮಗಳ ಕಟ್ಟುಪಾಡು

d. ನಮ್ಮಲ್ಲಿ ಜಿಜ್ಞಾಸಾ ಪ್ರವೃತ್ತಿ.

2. **ಪಾಶ್ಚಾತ್ಯರ ಸಂಪರ್ಕದಿಂದ ನಮ್ಮ ಜೀವನ ಕ್ರಮದಲ್ಲುಂಟಾದ ಬದಲಾವಣೆಯೇನು?**

a. ಲೌಕಿಕ ದೃಷ್ಟಿ ಮೇಲ್ವಾಯ್ದು ಬಂತು.

b. ನವೀನ ಸಮಾಜ ನಿರ್ಮಿತಿಯ ಹಂಬಲ ತಲೆದೋರಿತು.

c. ಮಧ್ಯಯುಗೀನ ಪಾಳೆಯಗಾರಿಕಾ ಪದ್ಧತಿ ಹೊರಟು ಹೋಯಿತು.

d. ಮತಧರ್ಮಗಳ ಕಟ್ಟುಪಾಡು ಮುಗಿಯಿತು.

3. **ಪಾಶ್ಚಾತ್ಯ ಸಂಪರ್ಕದ ಮೊದಲು ನಮ್ಮ ಜೀವನ ಕ್ರಮ ಏನಾಗಿತ್ತು?**

a. ಪಾಳೆಯಗಾರಿಕಾ ಪದ್ಧತಿಯಿತ್ತು.

b. ಮತಧರ್ಮಗಳ ಕಟ್ಟುಪಾಡಿನಲ್ಲಿದ್ದ ನಮ್ಮ ಜೀವನಕ್ರಮವು ಅದುವರೆಗೆ ಸಮಷ್ಟಿಯಾಗಿತ್ತು.

c. ಲೌಕಿಕ ದೃಷ್ಟಿಕೋನ ಅಷ್ಟೊಂದು ಇರಲಿಲ್ಲ.

d. ಪ್ರಗತಿಪರ ಮನೋಭಾವ ಇರಲಿಲ್ಲ.

4. **ಯಾವುದರ ಪಡಿನೆಳಲು ಸಾಹಿತ್ಯದಲ್ಲಿಯೂ ಕಂಡುಬಂದಿತು?**

a. ಪಾಶ್ಚಾತ್ಯ ಪ್ರಣಾಲಿ

b. ಪಾಳೆಯಗಾರಿಕಾ ಪದ್ಧತಿ

c. ಸಮಷ್ಠಿ ದೃಷ್ಟಿ.

d. ಪ್ರಗತಿಪರ ಮನೋಧರ್ಮ

5. **ಭಾಷಾ–ಸಾಹಿತ್ಯಗಳ ಸ್ವರೂಪ ಸಮಾನ ಲಕ್ಷಣದಿಂದ ಬೆಳೆಯಲು ಕಾರಣವೇನು?**

a. ಪಾಶ್ಚಾತ್ಯ ಸಂಪರ್ಕದ ಏಕಪ್ರಕಾರತೆ.

b. ಹತ್ತೊಂಬತ್ತನೆಯ ಶತಮಾನದ ಕಾಲ

c. ಸುಧಾರಣಾವಾದಿಗಳು

d. ನಮ್ಮ ಜಿಜ್ಞಾಸಾ ಪ್ರವೃತ್ತಿ.

**ಪ್ರಶ್ನೆ II. ಈ ಕೆಳಗೆ ಎರಡು ಪರಿಚ್ಛೇದಗಳನ್ನು ಕೊಡಲಾಗಿದೆ. ಅವುಗಳನ್ನು ಓದಿಕೊಂಡು ಯಾವುದಾದರೂ ಒಂದು ಪರಿಚ್ಛೇದದ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. 1 X 5 = 5**

ಪ್ರಾಚೀನ ಕಾಲದಲ್ಲಿ ಧರ್ಮವೇ ಭಾರತದ ನೆಲೆಗಟ್ಟಾಗಿ ಅದಕ್ಕೆ ತಕ್ಕಂತೆ ಜೀವನ ರೂಪುಗೊಂಡಿತ್ತು. ಅತಿ ಪ್ರಾಚೀನ ಕಾಲದಿಂದಲೇ ಆರ್ಯ ಜನಾಂಗ ಭಾರತದಲ್ಲಿ ಮೊದಲೇ ನೆಲೆಸಿದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು, ಧಾರ್ಮಿಕ–ಸಾಂಸ್ಕೃತಿಕ ಅಂಗಗಳಲ್ಲಿ ಒಂದರೊಡನೊಂದು ಹಾಸುಹೊಕ್ಕಾಗಿ ಸೇರಿಕೊಂಡು, ಪ್ರಪಂಚದ ಇತರೆಡೆಗಳಿಗಿಂತ ಭಿನ್ನವಾದ 'ಭಾರತೀಯತೆ'ಯೆಂಬುದರ ಪ್ರಾದುರ್ಭಾವವಾಯಿತು. ದೇವವಾಣಿಯೆಂದು ಹೆಸರಾದ ಸಂಸ್ಕೃತ, ಸುಸಂಸ್ಕೃತರಾದ ನಾಗರಿಕರ ಏಕೈಕ ಸಂವಹನ ಮಾಧ್ಯಮವಾಗಿತ್ತು. ಇದರಲ್ಲಿ ಪ್ರಬುದ್ಧರಾದ ಪ್ರಭಾವಶಾಲಿ ವ್ಯಕ್ತಿಗಳು ಅಸಂಖ್ಯಾತ ಜನಸಾಮಾನ್ಯರ ಜೀವನ ರೀತಿ, ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು, ತಮಗೆ ಬೇಕಾದಂತೆ ಅದನ್ನು ರೂಪಿಸಿದುದು ಪವಾಡಸದೃಶವಾಗಿದೆ. ಆ ಜನಸಾಮಾನ್ಯರ ಚಿಂತನೆಗಳೆಲ್ಲದರ ಮೇಲೆ ಈ ಶಿಷ್ಟತನದ ನೆರಳು ಒಂದು ರೀತಿಯಲ್ಲಿ ಆವರಿಸಿದರೂ, ಸಾಮಾನ್ಯ ಜನತೆಯ ಆಚಾರ–ವಿಚಾರಗಳು ಶಿಷ್ಟಕ್ಕಿಂತ ಭಿನ್ನವಾಗಿ ಇದರ ಜೊತೆಜೊತೆಯಾಗಿಯೇ ಇತ್ತೆಂಬುದೂ, ಅದೂ ಶಕ್ತಿಯುತವಾಗಿಯೂ ಇತ್ತೆಂಬುದು ನಿರ್ವಿವಾದ. ಮೊದಲು ತಳದಲ್ಲಿ ಇದ್ದ ಇದು, ಕಾಲಾಂತರದಲ್ಲಿ ಮೇಲೆ ತಲೆಯೆತ್ತಿ ಬೆಳೆದ ಪರಿಣಾಮವಾಗಿ, ಪ್ರಾದೇಶಿಕವಾಗಿ ಅನೇಕ ಭಾಷಾ ಪ್ರಭೇದಗಳು ಪ್ರಬಲವಾಗಿ, ಅವುಗಳಲ್ಲಿ ಸ್ವತಂತ್ರವಾಗಿ ಸಾಹಿತ್ಯ ರಚನೆಯಾಗಲಾರಂಭವಾಯಿತು. ಜೊತೆಗೆ ಧಾರ್ಮಿಕ ಕ್ರಾಂತಿಗಳೂ ಒದಗಿ, ಜೈನ–ಬೌದ್ಧ ಮುಂತಾದ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದುದರ ಪರಿಣಾಮವಾಗಿ ದೇಶೀಯ ಸಾಹಿತ್ಯ ವೈವಿಧ್ಯಮಯವಾಗಿ, ಬಹುಮುಖವಾಗಿ ಬೆಳೆಯಲು ಸಾಧ್ಯವಾಯಿತು. ಆದರೆ ಕಾಲಕ್ಕೆ ತಕ್ಕಂತೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಕೂಡ ಬದಲಾವಣೆಗಳಾಗತೊಡಗಿದವು. ವಿದೇಶೀ ಸಂಸ್ಕೃತಿಯ ಆಗಮನ ಭಾರತೀಯತ್ವದ ಮೇಲೆ ದೊಡ್ಡ ಆಘಾತವನ್ನುಂಟುಮಾಡಿತು. ಫಲಸ್ವರೂಪವಾಗಿ ನಾವು ನಮ್ಮ ತನವನ್ನೇ ಕಳೆದುಕೊಂಡು ನಾವು ಎತ್ತ ಹೋಗುತ್ತಿದ್ದೇವೆನ್ನುವುದು ನಮಗೇ ಅರ್ಥವಾಗದ ಸಂದಿಗ್ಧ ಸ್ಥಿತಿಗೆ ಬಂದು ತಲುಪಿದೆವು. ಇತ್ತ ದೇಶೀಯ ಪ್ರೀತಿಯನ್ನೂ ಬಿಡಲಾರದೆ, ಅತ್ತ ವಿದೇಶೀ ಮೋಹದಿಂದಲೂ ಹೊರಬರಲಾರದೆ ಒದ್ದಾಡುತ್ತಿದ್ದೇವೆ.

**ಪ್ರಶ್ನೆಗಳು :**

1. **ಭಾರತೀಯತೆಯ ಪ್ರಾದುರ್ಭಾವ ಹೇಗೆ ಉಂಟಾಯಿತು?**
   a. ಭಾರತದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು
   b. ಧಾರ್ಮಿಕ–ಸಾಂಸ್ಕೃತಿಕ ಅಂಗಗಳಲ್ಲಿ ಒಂದರೊಡನೊಂದು ಸಮ್ಮಿಲನಗೊಂಡು
   c. ಭಾರತದ ಅತಿ ಪ್ರಾಚೀನತೆಯ ಕಾರಣದಿಂದಾಗಿ
   d. ಆರ್ಯ ಜನಾಂಗ ಭಾರತದಲ್ಲಿ ಮೊದಲೇ ನೆಲೆಸಿದ್ದರಿಂದ.

2. **ಪ್ರಾಚೀನ ಕಾಲದಲ್ಲಿ ನಾಗರಿಕರೊಳಗೆ ಸಂವಹನ ಮಾಧ್ಯಮ ಯಾವುದಾಗಿತ್ತು?**
   a. ಭಾರತೀಯತೆ
   b. ಸಂಸ್ಕೃತ
   c. ಸುಸಂಸ್ಕೃತತೆ
   d. ಧಾರ್ಮಿಕತೆ–ಸಾಂಸ್ಕೃತಿಕತೆ

3. **ಯಾವುದನ್ನು ಪವಾಡ ಎಂದು ಲೇಖಕರು ಕರೆದಿದ್ದಾರೆ?**
   a. ಜನರು ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು
   b. ಭಾರತೀಯತೆಯೆಂಬುದರ ಪ್ರಾದುರ್ಭಾವ
   c. ಶಿಷ್ಟತನದ ನೆರಳು
   d. ಸಾಮಾನ್ಯ ಜನತೆಯ ಆಚಾರ–ವಿಚಾರಗಳು

4. **ಭಾಷಾ ಪ್ರಭೇದಗಳು ಹುಟ್ಟಲು ಏನು ಕಾರಣ?**
   a. ಸಂಸ್ಕೃತಿ ಮತ್ತು ಚಿಂತನೆ
   b. ಧಾರ್ಮಿಕತೆ–ಸಾಂಸ್ಕೃತಿಕತೆ
   c. ಜನಸಾಮಾನ್ಯರ ಚಿಂತನೆಗಳು
   d. ಸಾಮಾನ್ಯ ಜನತೆಯ ಆಚಾರ–ವಿಚಾರಗಳು

5. **ದೇಶೀಯ ಸಾಹಿತ್ಯ ಹೇಗೆ ವೈವಿಧ್ಯಮಯವಾಯಿತು?**
   a. ಜೈನ–ಬೌದ್ಧ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದ್ದರಿಂದ
   b. ಭಾಷಾ ಪ್ರಭೇದಗಳು ಪ್ರಬಲವಾಗಿದ್ದರಿಂದ
   d. ಜನಸಾಮಾನ್ಯರ ಜೀವನ ರೀತಿ
   d. ಪ್ರಬುದ್ಧರಾದ ಪ್ರಭಾವಶಾಲಿ ವ್ಯಕ್ತಿಗಳ ಕಾರಣದಿಂದಾಗಿ.

**ಅಥವಾ**

ಸಂಗೀತದಲ್ಲಿ ಕನ್ನಡದ ಬಳಕೆಯನ್ನು ನಿರ್ಧರಿಸುವಾಗ ನಾವು ಮೊದಲು ಇತ್ಯರ್ಥ ಮಾಡಿಕೊಳ್ಳಬೇಕಾದ ವಿಷಯ, ಕನ್ನಡಕ್ಕಾಗಿ ಸಂಗೀತವೇ ಅಥವಾ ಸಂಗೀತಕ್ಕಾಗಿ ಕನ್ನಡವೇ ಎಂಬುದು. ಏಕೆಂದರೆ ಸಂಗೀತ ರಚನೆಗಳಲ್ಲಿ ನಾನಾ ವಿಧಗಳಿವೆ. ಕೆಲವದರಲ್ಲಿ ಸಂಗೀತ ಪ್ರಧಾನ. ಇಲ್ಲಿ ಸಾಹಿತ್ಯದ ಪಾತ್ರ ಗೌಣ. ರಾಗವನ್ನು ಹರಡಿದಾಗ ಅಲ್ಲಲ್ಲಿ ತಗಲು ಹಾಕಲು ಇರುವ ಮೊಳೆಗಳಂತೆ ಇರುವುದು. ಇನ್ನೊಂದು ರೀತಿಯ ರಚನೆಗಳಲ್ಲಿ ಸಾಹಿತ್ಯ–ಸಂಗೀತ ಎರಡರ ಪಾತ್ರವೂ ಸಮ. ಮೂರನೆಯ ರೀತಿಯ ಪ್ರಕಾರಗಳಲ್ಲಿ ಸಾಹಿತ್ಯವು ಮುಂದು. ಸಂಗೀತವು ಅದರ ಅಂದವನ್ನು, ರುಚಿಯನ್ನು ಮೇಕಪ್ ಮಾಡುವ ಸಾಧನದಂತೆ. ಇನ್ನೊಂದು ರೀತಿಯ ರಚನೆಗಳಲ್ಲಿ ಸಾಹಿತ್ಯವೇ ಇಲ್ಲ. ಹೀಗೆ ಸಂಗೀತದಲ್ಲಿ ಭಾಷೆಯ ಬಳಕೆ ಒಂದೇ ರೀತಿ ಇಲ್ಲ. ಅದರ ಉಪಯೋಗವು ಸಂಗೀತದ ಅವಶ್ಯಕತೆಗನುಗುಣವಾಗಿರುತ್ತದೆಯೇ ವಿನಾ, ಇಲ್ಲಿ ಭಾಷೆಯ ಅವಶ್ಯಕತೆಗನುಗುಣವಾಗಿ ಸಂಗೀತವು ಹೊಂದಿಕೊಳ್ಳಲು ಸಾಧ್ಯವಿಲ್ಲ. ಇದು ಸಾಹಿತ್ಯ ಪ್ರಧಾನವಾದ ಹಾಡುವ ಪ್ರಕಾರಗಳಿಗೂ ಅನ್ವಯಿಸುವುದು. ಆ ಸಾಹಿತ್ಯವೂ ಹಾಡಲು ಒದಗಿರುವಂತಿರಬೇಕು. ಎಲ್ಲ ಸಾಹಿತ್ಯವೂ ಹಾಡಲು ಒದಗಿ ಬರುವುದಿಲ್ಲ. ಯಾವುದಾದರೂ ಸಾಹಿತ್ಯವನ್ನು ಬಲವಂತವಾಗಿ ಸಂಗೀತದ ಕವಚದೊಳಗೆ ತೂರಿಸಿದಲ್ಲಿ ಸಾಹಿತ್ಯ ಮತ್ತು ಸಂಗೀತಪ್ರಿಯರಿಬ್ಬರ ಕಿವಿಗೂ ಹಿತಕರವಾಗಿರುವುದು. ಭಾಷೆ ಮತ್ತು ಸಂಗೀತದ ವಿಷಯ ಬಂದಾಗ ಇವೆರಡೂ ಎಲ್ಲ ಜನತೆಯನ್ನೂ ಸೆಳೆಯಬಲ್ಲ ಮಾರ್ಗಸೇತುವಾಗಿದೆ ಎಂಬುದನ್ನು

ಅಲ್ಲಗಳೆಯಲಾಗುವುದಿಲ್ಲ. ಏಕೆಂದರೆ ಭಾಷೆ ಬದುಕಲು ಉಸಿರನ್ನು ಕೊಟ್ಟರೆ, ಬದುಕಿನ ಸಂವಹನ ಮಾರ್ಗವಾಗಿದ್ದರೆ, ಸಂಗೀತ ಆತ್ಮಾನಂದದ ಮಾರ್ಗವಾಗಿದೆ. ಬದುಕು ಸುಂದರವೂ ಅರ್ಥಪೂರ್ಣವೂ ಆಗಲು ಇವೆರಡರ ಸರಿಬೆರಕೆ, ಹದಬೆರಕೆ ಅತಿ ಅಗತ್ಯವಾಗಿದೆ.

**ಪ್ರಶ್ನೆಗಳು :**

1. **ಕನ್ನಡದಲ್ಲಿ ಸಂಗೀತದ ಬಳಕೆ ಮಾಡುವ ಮುನ್ನ ನಾವು ನಿಶ್ಚಯಿಸಬೇಕಾದ ಪ್ರಶ್ನೆ ಯಾವುದು?**
   a. ಸಂಗೀತ ರಚನೆಗಳಲ್ಲಿ ಎಷ್ಟು ವಿಧಗಳಿವೆ?
   b. ಇಲ್ಲಿ ಸಾಹಿತ್ಯದ ಪಾತ್ರವೇನು?
   c. ಕನ್ನಡಕ್ಕಾಗಿ ಸಂಗೀತವೇ ಅಥವಾ ಸಂಗೀತಕ್ಕಾಗಿ ಕನ್ನಡವೇ?
   d. ಸಾಹಿತ್ಯ–ಸಂಗೀತ ಎರಡರ ಪಾತ್ರವೂ ಸಮವೇ?

2. **ಸಂಗೀತ ರಚನೆಯಲ್ಲಿ ಎಷ್ಟು ವಿಧಗಳಿವೆ?**
   a. ಎರಡು
   b. ಮೂರು
   c. ನಾಲ್ಕು
   d. ಐದು

3. **ಸಾಹಿತ್ಯವನ್ನು ಕಡ್ಡಾಯವಾಗಿ ಸಂಗೀತದೊಡನೆ ಸೇರಿಸಿದರೆ ಏನಾಗುವುದು?**
   a. ಸಾಹಿತ್ಯ ಮತ್ತು ಸಂಗೀತಪ್ರಿಯರಿಬ್ಬರ ಕಿವಿಗೂ ಹಿತಕರವಾಗಿರುವುದು
   b. ಸಂಗೀತವು ಹೊಂದಿಕೊಳ್ಳಲು ಸಾಧ್ಯವಿಲ್ಲ
   c. ಸಾಹಿತ್ಯವು ಹೊಂದಿಕೊಳ್ಳಲು ಸಾಧ್ಯವಿಲ್ಲ
   d. ಒಂದಕ್ಕೊಂದು ಹೊಂದಾಣಿಕೆಯಾಗುವುದಿಲ್ಲ.

4. **ಸಾಹಿತ್ಯದ ಪಾತ್ರ ಅಪ್ರಧಾನವಿರುವ ಸಂಗೀತ ರಚನೆಯಿಂದ ಯಾವ ಪರಿಣಾಮ ಉಂಟಾಗುವುದು?**
   a. ಸಂಗೀತ ಕೇಳಲು ಮಧುರವಾಗಿರುವದಿಲ್ಲ.
   b. ಸಾಹಿತ್ಯದ ಅವಶ್ಯಕತೆಗನುಗುಣವಾಗಿ ಸಂಗೀತವು ಹೊಂದಿಕೊಳ್ಳಲು ಸಾಧ್ಯವಿಲ್ಲ.
   c. ಸಾಹಿತ್ಯ ಮತ್ತು ಸಂಗೀತಪ್ರಿಯರಿಬ್ಬರ ಕಿವಿಗೂ ಹಿತಕರವಾಗಿರುವುದು
   d. ರಾಗವನ್ನು ಹರಡಿದಾಗ ಅಲ್ಲಲ್ಲಿ ತಗಲು ಹಾಕಲು ಇರುವ ಮೊಳೆಗಳಂತೆ ಇರುವುದು.

5. **ಸಾಹಿತ್ಯ ಪ್ರಧಾನವಾದ ಸಂಗೀತ ರಚನೆಯಲ್ಲಿ ಸಂಗೀತದ ಪಾತ್ರವೇನು?**
   a. ಸಂಗೀತವು ಸಾಹಿತ್ಯದ ಅಂದವನ್ನು, ರುಚಿಯನ್ನು ಮೇಕಪ್ ಮಾಡುವ ಸಾಧನದಂತೆ ಮಹತ್ವದ್ದಾಗಿರುತ್ತದೆ.
   b. ಸಂಗೀತದಲ್ಲಿ ಭಾಷೆಯ ಬಳಕೆಯ ಅಗತ್ಯ ಇಲ್ಲ
   c. ಸಂಗೀತ ತನ್ನ ಅರ್ಥವನ್ನು, ಸತ್ವವನ್ನು ಕಳೆದುಕೊಳ್ಳುತ್ತದೆ.
   d. ಸಾಹಿತ್ಯ ಮತ್ತು ಸಂಗೀತ ಎರಡರ ಪಾತ್ರವೂ ಸಮವಾಗಿರುತ್ತದೆ.

# Section - B

## ಅನ್ವಯಿಕ ವ್ಯಾಕರಣ (ಬಹು ಅಯ್ಕೆಯ ಪ್ರಶ್ನೆಗಳು) – 16 ಅಂಕಗಳು

**ಪ್ರಶ್ನೆ III. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.**

**1 x 4 = 4**

**1) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.**
ರಾಮನು ಪೇಟೆಗೆ ಹೋದನು.

a. ರಾಮನು ಪೇಟೆಗೆ ಹೋಗಬಹುದೆ?

b. ರಾಮನು ಪೇಟೆಗೆ ಹೋಗಲಾರೆನೆಂದು ಹೇಳಿದನೆ?

c. ರಾಮನು ಪೇಟೆಗೆ ಹೋಗಲಾರನೆ?

d. ರಾಮನು ಪೇಟೆಗೆ ಹೋದನೆ?

**2) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.**

ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಿದರು.

a. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಲಿಲ್ಲ.

b. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಿರಲಿಕ್ಕಿಲ್ಲ.

c. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡುವುದಿಲ್ಲ.

d. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಿದರೆ?

**3) ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.**

ನಿನ್ನ್ಯಾರ

a. ನಿನ್ನ ಯಾರ

b. ನಿನ್ನನ್ನು ಯಾರೂ

c. ನೀನು ಯಾರ

d. ನೀನು ಯಾರಿಗೂ

**4) ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.**

ಕುಮಾರನು ಓಟದ ಪಂದ್ಯದಲ್ಲಿ ಓಡುತ್ತಿದ್ದಾನೆ.

a. ಕುಮಾರನು ಓಟದ ಪಂದ್ಯದಲ್ಲಿ ಓಡಬಹುದು.

b. ಕುಮಾರನು ಓಟದ ಪಂದ್ಯದಲ್ಲಿ ಓಡುವನು.

c. ಕುಮಾರನು ಓಟದ ಪಂದ್ಯದಲ್ಲಿ ಓಡುವನೇನೊ.

d. ಕುಮಾರನು ಓಟದ ಪಂದ್ಯದಲ್ಲಿ ಓಡಿದನು.

**5) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.**

ನಮ್ಮ ದೇಹವನ್ನು ಹಿಡಿದಿಡಬಹುದಾದರೂ ಮನಸ್ಸನ್ನು ಕಟ್ಟಿಹಾಕಲಾಗುವುದಿಲ್ಲ.

a. ದೇಹ, ಮನಸ್ಸು

b. ನಮ್ಮ, ಮನಸ್ಸು

c. ದೇಹ, ಹಿಡಿ

d. ಹಿಡಿ, ಕಟ್ಟು.

**ಪ್ರಶ್ನೆ IV. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.**

**1 x 4 = 4**

**1) ಕೆಳಗಿನ ಪದ ಬಿಡಿಸಿ ಬರೆಯಿರಿ.**

ಆರಿಗುಸುರುವೆನಾರ

a. ಆರಿಗೆ+ಸುರುವೆನಾರ

b. ಆರಿಗೆ+ಉಸುರುವೆನು+ಆರ

c. ಉಸುರುವೆನು+ಆರಿಗೆ

d. ಆರ್+ಆರಿಗೆ+ಉಸುರುವೆನ್.

**2) ಕೆಳಗಿನ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ.**

ರಾಮನೊಳ್

a. ಪ್ರಥಮಾ ವಿಭಕ್ತಿ ಪ್ರತ್ಯಯ

b. ಪಂಚಮಿ ವಿಭಕ್ತಿ ಪ್ರತ್ಯಯ

c. ಷಷ್ಠೀ ವಿಭಕ್ತಿ ಪ್ರತ್ಯಯ

d. ಸಪ್ತಮೀ ವಿಭಕ್ತಿ ಪ್ರತ್ಯಯ

**3) ಕೆಳಗಿನ ಪದದ ತತ್ಸಮ ತದ್ಭವ ರೂಪ ಬರೆಯಿರಿ.**

ಯೋಗಿ

a. ಭೋಗಿ

b. ಬೈರಾಗಿ

c. ಜೋಗಿ

d. ಸಾಗಿ.

**4) ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸಲಿಲ

a. ಸಾಲ, ಜಟಿಲ

b. ನೀರು, ಜಲ

c. ಉದಕ, ಪಾನಕ

d. ಕಮಲ, ಅನಿಲ.

**5) ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.**

ಬಗೆ

a. ಕ್ರಮ, ರೀತಿ

b. ಯೋಚನೆ, ಯೋಜನೆ

c. ದ್ರೋಹ, ಬೇರೆಬೇರೆ

d. ರೀತಿ, ಮನಸ್ಸು.

**ಪ್ರಶ್ನೆ V. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.**

**1 x 4 = 4**

**1) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.**

ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದರೂ ಆತ ಅವನಿಗೆ ಸಿಗಲಿಲ್ಲ.

a. ಮಹೇಶನು ತನ್ನ ಗೆಳೆಯ ರಮೇಶನನ್ನು ನೋಡುವವನಿದ್ದನು. ಆದರೆ ಆತ ಅವನಿಗೆ ಸಿಗಲಿಲ್ಲ.

b. ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋಗಲಿಲ್ಲ. ಆತ ಅವನಿಗೆ ಸಿಗಲಿಲ್ಲ.

c. ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದನು. ಆದರೂ ಆತ ಅವನಿಗೆ ಸಿಗಲಿಲ್ಲ.

d. ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋಗಿದ್ದರೂ ಆತ ಅವನಿಗೆ ಸಿಗಲಿಲ್ಲ.

**2) ಕೆಳಗಿನ ಪದ್ಯಭಾಗದ ಛಂದಸ್ಸಿನ ಹೆಸರು ತಿಳಿಸಿ.**

ಕದಡಿದ ಸಲಿಲಂ ತಿಳಿವಂ

ದದೆ ತನ್ನಿಂ ತಾನೆ ತಿಳಿದ ದಶವದನಂಗಾ

a. ಇದು ಕಂದ ಪದ್ಯದ ಛಂದಸ್ಸು.

b. ಸಾಂಗತ್ಯದ ಛಂದಸ್ಸು.

c. ವಾರ್ಧಕ ಷಟ್ಪದಿಯ ಛಂದಸ್ಸು.

d. ಭಾಮಿನಿ ಷಟ್ಪದಿಯ ಛಂದಸ್ಸು.

**3) ಕೆಳಗಿನ ಗಾದೆಯ ಸರಿಯಾದ ಅರ್ಥಸಾರವನ್ನು ಆರಿಸಿ ಬರೆಯಿರಿ.**

ಅಟ್ಟಕ್ಕೆ ನೆಗೆದು ಆಗಸಕೆ ನೆಗೆ.

a. ಅಟ್ಟಕ್ಕೆ ನೆಗೆಯಬಲ್ಲವನು ಮಾತ್ರ ಆಕಾಶಕ್ಕೂ ಹಾರಬಲ್ಲನು. ಅಟ್ಟಕ್ಕೆ ನೆಗೆಯಲಾಗದಿದ್ದರೆ ಆಕಾಶಕ್ಕೆ ಹಾರಲಾರ.

b. ಯಾವುದನ್ನೇ ಆಗಲಿ, ಹಂತ ಹಂತವಾಗಿ ಸಾಧಿಸುತ್ತ ಮೇಲೆ ಮೇಲಕ್ಕೆ ಹೋಗಬೇಕು. ಅಂದರೆ ಮಾತ್ರ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು.

c. ಎಲ್ಲಕ್ಕಿಂತ ಮುಖ್ಯವಾಗಿ ಆಗಸಕೆ ನೆಗೆಯುವ ಆಸೆ ಇರಬೇಕು. ಅದೇ ನಮ್ಮನ್ನು ಎತ್ತರಕ್ಕೆ ಒಯ್ಯುತ್ತದೆ.

d. ಅಟ್ಟವನ್ನೂ ಏರಬೇಕು; ಆಗಸವನ್ನೂ ಏರಬೇಕು. ಅಂದಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ.

**4) ಕೆಳಗಿನ ವಾಕ್ಯವನ್ನು ಅಪೂರ್ಣ ಭವಿಷ್ಯತ್ ಕಾಲ ಮತ್ತು ಭೂತಕಾಲಕ್ಕೆ ಬದಲಿಸಿರಿ.**

ರಾಮನು ಶಾಲೆಗೆ ಹೋಗುತ್ತಿದ್ದಾನೆ.

a. ರಾಮನು ಶಾಲೆಗೆ ಹೋಗುವನು ಮತ್ತು ಹೋಗಿರಬಹುದು.

b. ರಾಮನು ಶಾಲೆಗೆ ಹೋಗಲಿಕ್ಕಿಲ್ಲ ಮತ್ತು ಹೋದನು.

c. ರಾಮನು ಶಾಲೆಗೆ ಹೋಗುವನೆ? ಮತ್ತು ಹೋದನೆ?

d. ರಾಮನು ಶಾಲೆಗೆ ಹೋಗಬಹುದು ಮತ್ತು ಹೋಗಲಿಲ್ಲ.

**5) ಕೆಳಗಿನ ವಾಕ್ಯದಲ್ಲಿರುವ ಕರ್ಮಪದ ಮತ್ತು ವಿಧ್ಯರ್ಥಕ ಪದಗಳನ್ನು ಗುರುತಿಸಿ ಬರೆಯಿರಿ.**

ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಮಕ್ಕಳು ಚೆನ್ನಾಗಿ ಆಟವಾಡಲಿ.

a. ರಾಜ್ಯ ಮಟ್ಟ, ಕ್ರೀಡಾಕೂಟ

b. ಮಕ್ಕಳು, ಆಟವಾಡಲಿ.

c. ಕ್ರೀಡಾಕೂಟ, ಮಕ್ಕಳು

d. ರಾಜ್ಯ ಮಟ್ಟ, ಆಟ.

**ಪ್ರಶ್ನೆ VI. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ. 4 ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 4 = 4**

**1) ಕೆಳಗಿನ ಪದದ ಸಂಧಿ ಹೆಸರಿಸಿರಿ**

ಸೂರ್ಯೋದಯ

a. ವೃದ್ಧಿ ಸಂಧಿ

b. ಸವರ್ಣದೀರ್ಘ ಸಂಧಿ

c. ಗುಣ ಸಂಧಿ

d. ಆದೇಶ ಸಂಧಿ

**2) ಕೆಳಗಿನ ಪದದ ಸಮಾಸ ಹೆಸರಿಸಿರಿ**

ಪದ್ಮನಾಭ

a. ಕ್ರಿಯಾ ಸಮಾಸ

b. ತತ್ಪುರುಷ ಸಮಾಸ

c. ದ್ವಂದ್ವ ಸಮಾಸ

d ಬಹುವ್ರೀಹಿ ಸಮಾಸ

**3) ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿರಿ.**

ರಾಮನು ಹಣ್ಣನ್ನು ತಿಂದನು

a. ರಾಮನಿಂದ ಹಣ್ಣು ತಿನ್ನಲ್ಪಟ್ಟಿತು

b. ರಾಮನು ಹಣ್ಣನ್ನು ತಿನ್ನಲ್ಪಟ್ಟನು

c. ಹಣ್ಣಿನಿಂದ ರಾಮ ತಿನ್ನಲ್ಪಟ್ಟನು

d ಹಣ್ಣು ರಾಮನನ್ನು ತಿಂದಿತು.

**4) ಕೆಳಗಿನ ಆಂಗ್ಲ ವಾಕ್ಯದ ಸರಿಯಾದ ಕನ್ನಡ ರೂಪಾಂತರ ಆರಿಸಿ ಬರೆಯಿರಿ.**

Self dependancy is verymuch needed to all; especially developing countries like India, it is a must.

a.ಸ್ವಾವಲಂಬನೆ ಎನ್ನುವುದು ಪ್ರತಿಯೊಬ್ಬರಿಗೂ ಅತಿ ಅಗತ್ಯವಾಗಿದೆ. ವಿಶೇಷತಃ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಂತಹ ಭಾರತ ದೇಶಕ್ಕೆ ಇದು ಇಂದಿನ ಅಗತ್ಯವಾಗಿದೆ.

b. ಸ್ವಾವಲಂಬನೆ ಭಾರತದಂತಹ ದೇಶಕ್ಕೆ ಅತಿ ಅಗತ್ಯವಾಗಿದೆ.

c. ಭಾರತ ಸೇರಿದಂತೆ ವಿಶ್ವದ ಎಲ್ಲ ರಾಷ್ಟ್ರಗಳಿಗೂ ಸ್ವಂತ ಅವಲಂಬನೆ ಬಹಳ ಅಗತ್ಯವಾಗಿದೆ.

d. ಸ್ವಾವಲಂಬನೆ ಎನ್ನುವುದು ವಿಶೇಷವಾಗಿ ಭಾರತಕ್ಕೆ ಅಗತ್ಯವಾಗಿದೆ.

## Section - C

**ವಾಚನ ಮತ್ತು ಗ್ರಹಿಕಾ ಕೌಶಲ : ಪರಿಚಿತ ಪದ್ಯ ,ಗದ್ಯ, ದೀರ್ಘಗದ್ಯ : 14 ಅಂಕಗಳು**

**ಪ್ರಶ್ನೆ VII. ಕೆಳಗಿನ ಪದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 4 = 4**

ದನಗಳಿಗೆ ಮೇವಿಲ್ಲ
ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ,
ನನ್ನವರು
ಸತ್ತ ದನಗಳ ಕಿತ್ತು ತಿನ್ನುವುದನ್ನು
ಕಣ್ಣಾರೆ ಕಾಣುತ್ತ

ಕತಕತನೆ ಕುದಿವ ಅಗ್ನಿ ಪರ್ವತವಾಗಿದ್ದೇನೆ.
ಏನೂ ಮಾಡಲಾಗದೆ
ಅವರ ಸ್ಥಿತಿ ನೋಡಲಾಗದೆ
ಅವರಿಗಾಗಿ
ಮುಗಿಲತ್ತ ಕೈಚಾಚಿ ನಿಂತಿದ್ದೇನೆ,
ಧಗಧಗಿಸಿ ಉರಿವ ಜ್ವಾಲಾಮುಖಿಯಾಗಿದ್ದೇನೆ.
ನನ್ನವರಿಗಾಗಿ
ನಾನೆಂದೂ ನಂಬಿರದ ದೇವರಲ್ಲಿ ಮೊರೆಯಿಡುತ್ತೇನೆ,
ಕಂಡೇ ಇರದ ದೈವದ ಸಹಾಯ ಬೇಡುತ್ತೇನೆ.
ಯಾರೂ ನನ್ನವರ ಕೈ ಹಿಡಿಯದಾದಾಗ
ನನ್ನ ಕಂಬನಿಯ ಲಾವಾರಸದಲ್ಲಿ
ವಿಶ್ವವನ್ನೇ ಮುಳುಗಿಸಿಬಿಡುವ
ಛಲ ಮೂಡುತ್ತದೆ.
ಬೆಂಕಿ ನಾಲಗೆ ಚಾಚಿ ನನ್ನವರ ದಾರಿದ್ರ್ಯವನ್ನೇ
ಆಪೋಶನ ಮಾಡುತ್ತೇನೆ.
ಅವರ ದೀನ
ದಲಿತತನಕ್ಕೆ ಧಿಕ್ಕಾರವಿರಲಿ!
ಅವರ ನೋವನ್ನೇ
ಸರ್ವನಾಶ ಮಾಡುತ್ತೇನೆ.
ಆಕಾಶದಲ್ಲಿ
ಕಾರ್ಮೋಡ ಕವಿಸುವ ನಗು
ಮಳೆ ಸುರಿಸುವ ನಗು
ಹೊಳೆ ಸುರಿಸುವ ನಗು
ಬೆಳೆ ಬೆಳೆಸುವ ನಗು
ದನ, ಜನ ಎಲ್ಲ ಕೂಡಿ
ನಗುತ್ತೇವೆ
ಒಮ್ಮೆ ನಕ್ಕೇ ನಗುತ್ತೇವೆ.

**ಪ್ರಶ್ನೆಗಳು :**

**1. ಕವಯಿತ್ರಿ ಏನನ್ನು ಕಾಣುತ್ತಿದ್ದಾರೆ?**

a. ದನಗಳಿಗೆ ಮೇವಿಲ್ಲ
b. ಜನಗಳಿಗೆ ನೀರಿಲ್ಲ
c. ಗಂಜಿಗೂ ಗತಿಯಿಲ್ಲ,
d. ಸತ್ತ ದನಗಳ ಕಿತ್ತು ತಿನ್ನುವುದನ್ನು.

**2. ಜನ, ದನಗಳಿಗೆ ಏನಿಲ್ಲ?**

a. ಜನಗಳಿಗೆ ನೀರಿಲ್ಲ
b. ದನಗಳಿಗೆ ಮೇವಿಲ್ಲ
c. ಗಂಜಿಗೂ ಗತಿಯಿಲ್ಲ,
d. ಜನ, ದನಗಳಿಗೆ ನೀರು, ಮೇವಿಲ್ಲ.

**3. ಕವಯಿತ್ರಿ ಮುಗಿಲತ್ತ ಕೈಚಾಚಿದ್ದೇಕೆ?**

a. ಏನೂ ಮಾಡಲಾಗದೆ
b. ಅವರ ಸ್ಥಿತಿ ನೋಡಲಾಗದೆ
c. ಅವರ ಸ್ಥಿತಿ ನೋಡಲಾಗದೆ, ಏನೂ ಮಾಡಲಾಗದೆ
d. ಹೇಗಾದರೂ ಮಳೆ ಬಂದರೆ ಸಾಕೆಂದು.

**4. ಕವಯಿತ್ರಿಯಲ್ಲಿ ಎಂತಹ ಛಲ ಮೂಡುತ್ತದೆ?**

a. ದೈವದ ಸಹಾಯ ಬೇಡುವ

b. ಅವರ ದೀನ, ದಲಿತತನಕ್ಕೆ ಧಿಕ್ಕಾರ ಹಾಕುವ

c. ತಮ್ಮ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿ ಬಿಡುವ

d ಅವರ ನೋವನ್ನೇ ಸರ್ವನಾಶ ಮಾಡಿಬಿಡುವ.

**ಪ್ರಶ್ನೆ VIII. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 5 = 5**

ಈಚಿನ ವರ್ಷಗಳಲ್ಲಿ ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವುದನ್ನು ಅನುಭವಕ್ಕೆ ತೆಗೆದುಕೊಂಡಿದ್ದಾರೆ. ಉದ್ಯೋಗದ ಸಮಸ್ಯೆ ತೀವ್ರತರವಾಗಿದೆ. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ. ಒಂದು ಹಂತದವರೆಗಿನ ನೇಮಕಾತಿಯಲ್ಲಿ ಸ್ಥಳೀಯರನ್ನೇ ಪರಿಗಣಿಸಬೇಕಾದ ಅಗತ್ಯವಿದ್ದರೂ ಇಲ್ಲಿ ಹಾಗಾಗುತ್ತಿಲ್ಲ. ಆ ಪ್ರದೇಶದ ಜನರಿಗೇ ಉದ್ಯೋಗಾವಕಾಶಗಳು ದೊರೆಯದಿದ್ದರೆ ಅಲ್ಲಿ ಉದ್ಯೋಗಗಳು ಆರಂಭಗೊಳ್ಳುವ ಉದ್ದೇಶವೇನು? ಉಪಯೋಗವೇನು? ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು ನೆರೆಹೊರೆಯವರು ಆಕ್ರಮಿಸಿಕೊಂಡು ಬಿಡುತ್ತಾರೆ. ಅಲ್ಲಿಯೂ ಕನ್ನಡಿಗರಿಗೆ ಅವಕಾಶಗಳಿಲ್ಲ. ಇದರಿಂದ ಕನ್ನಡಿಗರು ಉದ್ಯೋಗದ ವಿಷಯದಲ್ಲಿ ಭೀತಿಗೊಂಡಿರುವುದು ಸಹಜ. ಕನ್ನಡಿಗರ ಆತ್ಮಹತ್ಯಾಕಾರಿಯಾದ ಔದಾರ್ಯ ಧೋರಣೆಯಿಂದ ಈಗಾಗಲೇ ಬೆಂಗಳೂರೂ ಸೇರಿದಂತೆ ಕರ್ನಾಟಕದ ಅನೇಕ ಕಡೆ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ಇತ್ತೀಚೆಗೆ ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕೆಂಬ ಅಪಸ್ವರವನ್ನೂ ಕೇಳಿದ್ದೇವೆ. ಕನ್ನಡಿಗರು ಕನ್ನಡ ನಾಡಿನಲ್ಲಿಯೇ ತಬ್ಬಲಿಗಳಾದರೆ ಅವರಿಗೆ ಆಶ್ರಯವೆಲ್ಲಿದೆ? ಕನ್ನಡಿಗರ ಸಂಕಷ್ಟಗಳಿಗೂ ಒಂದು ಮಿತಿಯಿದೆ. ಅವರ ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು. ಬದುಕು ಭಾಷೆಗಿಂತ ದೊಡ್ಡದು ಎಂದು ಹೇಳಿದ್ದಾರೆ. ಆದರೆ ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

**ಪ್ರಶ್ನೆಗಳು :**

1. **ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?**
   a. ಸಂಕಷ್ಟಗಳನ್ನು
   b. ನಮ್ಮ ನಾಡನ್ನು
   c. ಭಾಷೆಯನ್ನು
   d. ಬದುಕುವವರನ್ನು

2. **ನಾವು ಯಾವ ಅಪಸ್ವರವನ್ನು ಕೇಳಿದ್ದೇವೆ?**
   a. ಸಂಕಷ್ಟಗಳಿಗೂ ಒಂದು ಮಿತಿಯಿದೆ
   b. ಕನ್ನಡಿಗರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ
   c. ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕು
   d ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು

3. **ನೆರೆಹೊರೆಯವರು ಏನನ್ನು ಆಕ್ರಮಿಸಿಕೊಂಡು ಬಿಡುತ್ತಾರೆ?**
   a. ಕನ್ನಡ ನಾಡನ್ನು
   b. ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು
   c. ಪರರು ನಮ್ಮ ಭಾಷೆಯನ್ನು
   d. ಕನ್ನಡಿಗರಿಗೆ ದೊರೆಯಬೇಕಾದ ಪಾಲು

4. **ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವೇನು?**
   a. ಕನ್ನಡ ನಾಡಿನಲ್ಲಿ ಕನ್ನಡಿಗರಿಗೇ ಉದ್ಯೋಗ ಸಿಗುತ್ತಿಲ್ಲ
   b. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ.
   c. ನಮ್ಮ ನೆಲ, ಉದ್ಯಮಗಳನ್ನು ನೆರೆಹೊರೆಯವರು ಆಕ್ರಮಿಸಿಕೊಳ್ಳುತ್ತಿರುವುದು
   d. ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ

5. **ಕನ್ನಡಿಗರು ಅಲ್ಪಸಂಖ್ಯಾತರಾಗಲು ಕಾರಣವೇನು?**
   a. ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿದೆ
   b. ಪರಭಾಷಿಕರು ಹೆಚ್ಚಾಗುತ್ತಿದ್ದಾರೆ
   c. ಕನ್ನಡಿಗರ ಔದಾರ್ಯ ಧೋರಣೆ
   d. ಕನ್ನಡಿಗರ ಉದಾಸೀನ ಧೋರಣೆ.

**ಪ್ರಶ್ನೆ IX. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 5 = 5**

ಹಳೆಕೊಪ್ಪದ ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ ಒಂದು ವಿಚಿತ್ರ ವಿದ್ಯಮಾನ ಜರುಗಿತು. ಮೂಡಿಗೆರೆಗೂ ಅದರ ಹಿನ್ನೆಲೆಯಲ್ಲಿರುವ ಮನ್ನಾಜಂಗ್ಲಿಗೂ ನಡುವೆ ಹಳೆಕೊಪ್ಪ ಬರುತ್ತದೆ. ತೋಟದ ಮನೆಯಲ್ಲಿ ಮಲಗಿದ್ದ ಸುಬ್ಬಣ್ಣನಿಗೆ ಮನೆಯ ಹಿತ್ತಲಲ್ಲಿ ಇದ್ದಕ್ಕಿದ್ದಂತೆ ಅನೇಕ ನಾಯಿಗಳು ಬೊಗಳುವುದು ಕೇಳಿಸಿತು. ಇಷ್ಟೊಂದು ನಾಯಿಗಳು ಎಲ್ಲಿಂದ ತನ್ನ ಮನೆಯ ಹಿತ್ತಲಿಗೆ ಬಂದವು ಎಂದು ಅಚ್ಚರಿಪಡುತ್ತ ಏನು ಗಲಾಟೆ ನೋಡಲು ಸುಬ್ಬಣ್ಣ ಲಾಟೀನು ಹಿಡಿದು ಹೊರಬಂದ. ಕೊಟ್ಟಿಗೆ ಬಳಿ ಗಲಭೆ ಮಾಡುತ್ತಿದ್ದ ನಾಯಿಗಳನ್ನು ಓಡಿಸಲು ಹಚಾ ಎಂದು ಕೂಗುತ್ತ ಸುಬ್ಬಣ್ಣ ಅತ್ತ ಸಾಗುತ್ತಲೂ ಕೊಟ್ಟಿಗೆ ಕಂಬಗಳು ಲಟಲಟ ಮುರಿದದ್ದೂ ಎಂಥದೋ ಕತ್ತಲಲ್ಲಿ ಧಡಧಡ ನಡೆದ ಸದ್ದೂ ಅದರ ಹಿಂದೆಯೇ ನಾಯಿಗಳ ದಂಡು ಬೊಗಳಿಕೊಂಡು ಓಡಿದ್ದೂ ಕೇಳಿಸಿತು. ಗಾಬರಿಯಿಂದ ನೋಡುತ್ತಿದ್ದ ಸುಬ್ಬಣ್ಣನ ಕಣ್ಣೆದುರೇ ಇಡೀ ಕೊಟ್ಟಿಗೆಯ ಮಾಡು ದೊಪ್ಪನೆ ಕುಸಿದು ಬಿತ್ತು. ಕೊಟ್ಟಿಗೆಯೊಳಗಿದ್ದ ಹಲವಾರು ಮೇಕೆಗಳು ಅರಚಲು ಶುರುಮಾಡಿದವು. ಅಕ್ಕಪಕ್ಕದ ಮನೆಯವರೂ ಆಳುಗಳೂ ಸೇರಿ ಕುಸಿದು ಬಿದ್ದಿದ್ದ ಮೇಕೆಗಳನ್ನು ಹೊರತೆಗೆಯುವುದರೊಳಗೆ ಕೆಲವು ಸತ್ತೇಹೋದವು.

ಕೊಟ್ಟಿಗೆಯನ್ನೇ ಉರುಳಿಸಿ ಓಡಿ ಹೋಗಬೇಕಾದರೆ ಇದು ಆನೆಯಂಥ ಪ್ರಾಣಿಗೆ ಮಾತ್ರ ಸಾಧ್ಯ ಎಂದು ಊಹಿಸಿದ ಅವರು ಮೇಕೆಯ ಮೇವನ್ನು ಕದ್ದಿರಬೇಕಾದರೆ ಇದು ಕೃಷ್ಣೇಗೌಡರ ಆನೆಯೇ ಸರಿ ಎಂದು ನಿರ್ಧರಿಸಿ ಸತ್ತ ಮೇಕೆಗಳನ್ನು ಎದುರಿಗಿಟ್ಟುಕೊಂಡು ಕೃಷ್ಣೇಗೌಡರ ಆನೆಗೆ ಬಗೆಬಗೆಯಾಗಿ ನಿಂದಿಸತೊಡಗಿದರು. ''ಇನ್ನೊಂದು ಸಾರಿ ಅದು ಇತ್ತಲಾಗಿ ಮುಖ ಹಾಕಲಿ, ಅದನ್ನು ಕೋವೀಲೆ ಹೊಡೀತೀನಿ'' ಎಂದು ಸುಬ್ಬಣ್ಣ ಅಲ್ಲಿ ಅನುಕಂಪ ಸೂಚಿಸುತ್ತ ನಿಂತಿದ್ದ ಅಕ್ಕಪಕ್ಕದ ಮನೆಯ ಪ್ರೇಕ್ಷಕರೆದುರು ಕೂಗಾಡಿದ.

**ಪ್ರಶ್ನೆಗಳು :**

1. **ವಿಚಿತ್ರ ವಿದ್ಯಮಾನಗಳು ಎಲ್ಲಿ ನಡೆದವು?**
   a. ಹಳೆಕೊಪ್ಪದಲ್ಲಿ
   b. ಸುಬ್ಬಣ್ಣನ ಮನೆಯಲ್ಲಿ
   c. ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ
   d. ಕೊಟ್ಟಿಗೆಯಲ್ಲಿ

2. **ಕೊಟ್ಟಿಗೆಯನ್ನು ಬೀಳಿಸಿದ್ದು ಯಾರು?**
   a. ನಾಯಿಗಳು
   b. ಮೇಕೆಗಳು
   c. ಜನರು
   d. ಕೃಷ್ಣೇಗೌಡರ ಆನೆ

3. **ವಿಚಿತ್ರ ವಿದ್ಯಮಾನ ಯಾವುದು?**
   a. ನಾಯಿಗಳು ಬೊಗಳುವುದು
   b. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದು
   c. ಮೇಕೆಗಳು ಅರಚಿದ್ದು
   d. ಕೆಲ ಮೇಕೆಗಳು ಸತ್ತಿದ್ದು

4. **ಮೇಕೆಗಳು ಏಕೆ ಅರಚಲು ಶುರುಮಾಡಿದವು?**
   a. ನಾಯಿಗಳು ಬೊಗಳಿದ್ದರಿಂದ
   b. ಸುಬ್ಬಣ್ಣ ಬಂದಿದ್ದರಿಂದ
   c. ಆನೆ ಬಂದಿದ್ದರಿಂದ
   d. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದರಿಂದ

5. **ಜನರು ಯಾರನ್ನು ನಿಂದಿಸತೊಡಗಿದರು?**
   a. ಕೃಷ್ಣೇಗೌಡರ ಆನೆಯನ್ನು
   b. ನಾಯಿಗಳನ್ನು
   c. ಕೃಷ್ಣೇಗೌಡರನ್ನು
   d. ಮೇಕೆಗಳನ್ನು.

## PART B Section D

### ಪದ್ಯಗಳ ಅಧ್ಯಯನ,ಕವಿ ಪರಿಚಯ ಮತ್ತು ಸೃಜನಾತ್ಮಕ ಬರವಣಿಗೆ : 40 ಅಂಕಗಳು

**ಪ್ರಶ್ನೆ X. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** 2 x 3 = 06

1) ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?
2) ದುರ್ಜನರ ಕಾರ್ಯ ಯಾವ ಬಗೆಯದು?
3) ಮತದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

**ಪ್ರಶ್ನೆ XI ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 3 x 3 = 09

1) 'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?
2) ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?

**ಅಥವಾ**

"ಮಾತೇ ಮರೆತುಹೋಗಿದೆ ಕಣೆ".

3) "ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ"

**ಪ್ರಶ್ನೆ XII. ಕೆಳಗಿನ ಕವಿ/ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ.** 3 x 1 = 03

1. ಪುಲಿಗೆರೆ ಸೋಮನಾಥ 2. ಮುದ್ದಣ 3. ಡಾ. ಹಾ.ಮಾ. ನಾಯಕ.

**ಪ್ರಶ್ನೆ XIII ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.** 4 x 3 = 12

1) ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?

**ಅಥವಾ**

ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಹೇಗೆ? ವಿವರಿಸಿರಿ.

**2)** ಯಾವ–ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?

**ಅಥವಾ**

ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

**3)** ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

**ಅಥವಾ**

ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

**ಪ್ರಶ್ನೆ XIV ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150–200 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** 5

1. ತ್ಯಾಜ್ಯ ವಸ್ತುಗಳ ಮರುಬಳಕೆ
2. ಕೊರೊನಾ ತಡೆಗಟ್ಟುವಲ್ಲಿ ಯುವಜನತೆಯ ಪಾತ್ರ
3. ರಾಷ್ಟ್ರೀಯ ಭಾವೈಕ್ಯತೆ.

**ಪ್ರಶ್ನೆ XV.** ಕನ್ನಡ ನಾಡು–ನುಡಿಯನ್ನು ಅಭಿವೃದ್ಧಿಗೊಳಿಸುವ ಕುರಿತು ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ **5**

**ಅಥವಾ**

ನಿಮ್ಮ ಊರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಕೋರಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.

# CENTRAL BOARD OF SECONDARY EDUCATION

## 05. CODE NO. 115
## CLASS XII KANNADA
## 2022 – 2023
## MARKING SCHEME

**One Paper** **3 Hours** **Max. Marks : 80**

**ತರಗತಿ : 12** **ಸಿಬಿಎಸ್‌ಇ** **ವಿಷಯ : ಕನ್ನಡ**

2022 – 2023

**ಮಾದರಿ ಉತ್ತರ ಪತ್ರಿಕೆ**

**ಒಂದು ಪತ್ರಿಕೆ** **ಸಮಯ : 3 ಗಂಟೆ** **ಅಂಕಗಳು : 80**

---

## PART A Section A

**ಪ್ರಶ್ನೆ I ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪರಿಚ್ಛೇದವನ್ನು ಆಯ್ಕೆ ಮಾಡಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 X 5 = 5**

1. **1. ತಂತ್ರಜ್ಞಾನದಲ್ಲಿ ಉಂಟಾಗುವ ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಸಾಮಾನ್ಯವಾಗಿ ಏಕೆ ಉಂಟಾಗದು?**
   b. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.
2. **ತಜ್ಞರು ಹೇಳಿದಷ್ಟನ್ನೆ ಕಾರ್ಮಿಕ ಮಾಡಲು ಕಾರಣವೇನು?**
   a. ಅವನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುತ್ತಿಲ್ಲ.
3. **ತಂತ್ರಜ್ಞಾನದ ಬದಲಾವಣೆ ಕಾರ್ಮಿಕನಿಗೆ ಏಕೆ ತಿಳಿಯುವುದಿಲ್ಲ?**
   a. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.
4. **ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಕಾರ್ಮಿಕನಿಗೆ ಹೇಗೆ ನೆರವಾಗಬಹುದು?**
   b. ಕಾರ್ಮಿನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುಕೂಲವಾಗುತ್ತದೆ.
5. **ವಿದೇಶೀ ಭಾಷೆಯ ಬಳಕೆಯಿಂದ ಕಾರ್ಮಿಕನಿಗಾಗುವ ತೊಂದರೆಯೇನು?**
   b. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವದಿಲ್ಲ.

**ಅಥವಾ**

1. **ಅರುಣೋದಯ ಸಾಹಿತ್ಯದ ಉದಯಕ್ಕೆ ಕಾರಣವೇನು?**
   a. ಪಾಶ್ಚಾತ್ಯದ ಸಂಪರ್ಕದ ಪರಿಣಾಮ
2. **ಪಾಶ್ಚಾತ್ಯರ ಸಂಪರ್ಕದಿಂದ ನಮ್ಮ ಜೀವನ ಕ್ರಮದಲ್ಲುಂಟಾದ ಬದಲಾವಣೆಯೇನು?**
   c. ಮಧ್ಯಯುಗೀನ ಪಾಳೆಯಗಾರಿಕಾ ಪದ್ಧತಿ ಹೊರಟುಹೋಯಿತು.
3. **ಪಾಶ್ಚಾತ್ಯ ಸಂಪರ್ಕದ ಮೊದಲು ನಮ್ಮ ಜೀವನ ಕ್ರಮ ಏನಾಗಿತ್ತು?**
   b. ಮತಧರ್ಮಗಳ ಕಟ್ಟುಪಾಡಿನಲ್ಲಿದ್ದ ನಮ್ಮ ಜೀವನಕ್ರಮವು ಅದುವರೆಗೆ ಸಮಷ್ಟಿಯಾಗಿತ್ತು.
4. **ಯಾವುದರ ಪಡಿನೆಳಲು ಸಾಹಿತ್ಯದಲ್ಲಿಯೂ ಕಂಡುಬಂದಿತು?**
   a. ಪಾಶ್ಚಾತ್ಯ ಪ್ರಣಾಲಿ
5. **ಭಾಷಾ–ಸಾಹಿತ್ಯಗಳ ಸ್ವರೂಪ ಸಮಾನ ಲಕ್ಷಣದಿಂದ ಬೆಳೆಯಲು ಕಾರಣವೇನು?**
   a. ಪಾಶ್ಚಾತ್ಯ ಸಂಪರ್ಕ.

**ಪ್ರಶ್ನೆ II. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪರಿಚ್ಛೇದವನ್ನು ಆಯ್ಕೆ ಮಾಡಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 X 5 = 5**

**1. ಭಾರತೀಯತೆಯ ಪ್ರಾದುರ್ಭಾವ ಹೇಗೆ ಉಂಟಾಯಿತು?**

a. ಭಾರತದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು

**2. ಪ್ರಾಚೀನ ಕಾಲದಲ್ಲಿ ನಾಗರಿಕರೊಳಗೆ ಸಂವಹನ ಮಾಧ್ಯಮ ಯಾವುದಾಗಿತ್ತು?**

b. ಸಂಸ್ಕೃತ

**3. ಯಾವುದನ್ನು ಪವಾಡ ಎಂದು ಲೇಖಕರು ಕರೆದಿದ್ದಾರೆ?**

a. ಜನರು ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು

**4. ಭಾಷಾ ಪ್ರಭೇದಗಳು ಹುಟ್ಟಲು ಏನು ಕಾರಣ?**

c. ಜನಸಾಮಾನ್ಯರ ಚಿಂತನೆಗಳು

**5. ದೇಶೀಯ ಸಾಹಿತ್ಯ ಹೇಗೆ ವೈವಿಧ್ಯಮಯವಾಯಿತು?**

a. ಜೈನ-ಬೌದ್ಧ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದ್ದರಿಂದ

**ಅಥವಾ**

**1. ಕನ್ನಡದಲ್ಲಿ ಸಂಗೀತದ ಬಳಕೆ ಮಾಡುವ ಮುನ್ನ ನಾವು ನಿಶ್ಚಯಿಸಬೇಕಾದ ಪ್ರಶ್ನೆ ಯಾವುದು?**

c. ಕನ್ನಡಕ್ಕಾಗಿ ಸಂಗೀತವೇ ಅಥವಾ ಸಂಗೀತಕ್ಕಾಗಿ ಕನ್ನಡವೇ?

**2. ಸಂಗೀತ ರಚನೆಯಲ್ಲಿ ಎಷ್ಟು ವಿಧಗಳಿವೆ?**

b. ಮೂರು

**3. ಸಾಹಿತ್ಯವನ್ನು ಕಡ್ಡಾಯವಾಗಿ ಸಂಗೀತದೊಡನೆ ಸೇರಿಸಿದರೆ ಏನಾಗುವುದು?**

a. ಸಾಹಿತ್ಯ ಮತ್ತು ಸಂಗೀತಪ್ರಿಯರಿಬ್ಬರ ಕಿವಿಗೂ ಹಿತಕರವಾಗಿರುವುದು

**4. ಸಾಹಿತ್ಯದ ಪಾತ್ರ ಅಪ್ರಧಾನವಿರುವ ಸಂಗೀತ ರಚನೆಯಿಂದ ಯಾವ ಪರಿಣಾಮ ಉಂಟಾಗುವುದು?**

d ರಾಗವನ್ನು ಹರಡಿದಾಗ ಅಲ್ಲಲ್ಲಿ ತಗಲು ಹಾಕಲು ಇರುವ ಮೊಳೆಗಳಂತೆ ಇರುವುದು.

**5. ಸಾಹಿತ್ಯ ಪ್ರಧಾನವಾದ ಸಂಗೀತ ರಚನೆಯಲ್ಲಿ ಸಂಗೀತದ ಪಾತ್ರವೇನು?**

a. ಸಂಗೀತವು ಸಾಹಿತ್ಯದ ಅಂದವನ್ನು, ರುಚಿಯನ್ನು ಮೇಕಪ್ ಮಾಡುವ ಸಾಧನದಂತೆ ಮಹತ್ವದ್ದಾಗಿರುತ್ತದೆ.

# Section B

**ಪ್ರಶ್ನೆ III. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**1) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.**

d. ರಾಮನು ಪೇಟೆಗೆ ಹೋದನೆ?

**2) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.**

a. ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಲಿಲ್ಲ.

**3) ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.**

b. ನಿನ್ನನ್ನು ಯಾರೂ

**4) ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.**

a. ಕುಮಾರನು ಓಟದ ಪಂದ್ಯದಲ್ಲಿ ಓಡುವನು.

**5) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.**

d. ಹಿಡಿ, ಕಟ್ಟು.

**ಪ್ರಶ್ನೆ IV. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**1) ಕೆಳಗಿನ ಪದ ಬಿಡಿಸಿ ಬರೆಯಿರಿ.**

b. ಆರಿಗೆ+ಉಸುರುವೆನು+ಆರ

**2) ಕೆಳಗಿನ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ.**

d. ಸಪ್ತಮೀ ವಿಭಕ್ತಿ ಪ್ರತ್ಯಯ

**3) ಕೆಳಗಿನ ಪದದ ತತ್ಸಮ ತದ್ಭವ ರೂಪ ಬರೆಯಿರಿ.**

c. ಜೋಗಿ

**4) ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.**

b. ನೀರು, ಜಲ

**5) ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.**

d. ರೀತಿ, ಮನಸ್ಸು.

**ಪ್ರಶ್ನೆ V. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**1) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.**

c. ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದನು. ಆದರೂ ಆತ ಅವನಿಗೆ ಸಿಗಲಿಲ್ಲ.

**2) ಕೆಳಗಿನ ಪದ್ಯಭಾಗದ ಛಂದಸ್ಸಿನ ಹೆಸರು ತಿಳಿಸಿ.**

a. ಇದು ಕಂದ ಪದ್ಯದ ಛಂದಸ್ಸು.

**3) ಕೆಳಗಿನ ಗಾದೆಯ ಸರಿಯಾದ ಅರ್ಥಸಾರವನ್ನು ಆರಿಸಿ ಬರೆಯಿರಿ.**

a. ಯಾವುದನ್ನೇ ಆಗಲಿ, ಹಂತ ಹಂತವಾಗಿ ಸಾಧಿಸುತ್ತ ಮೇಲೆ ಮೇಲಕ್ಕೆ ಹೋಗಬೇಕು. ಅಂದರೆ ಮಾತ್ರ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು.

**4) ಕೆಳಗಿನ ವಾಕ್ಯವನ್ನು ಅಪೂರ್ಣ ಭವಿಷ್ಯತ್ ಕಾಲ ಮತ್ತು ಭೂತಕಾಲಕ್ಕೆ ಬದಲಿಸಿರಿ.**

d. ರಾಮನು ಶಾಲೆಗೆ ಹೋಗಬಹುದು ಮತ್ತು ಹೋಗಲಿಲ್ಲ.

**5) ಕೆಳಗಿನ ವಾಕ್ಯದಲ್ಲಿರುವ ಕರ್ಮಪದ ಮತ್ತು ವಿಧ್ಯರ್ಥಕ ಪದಗಳನ್ನು ಗುರುತಿಸಿ ಬರೆಯಿರಿ.**

b. ಮಕ್ಕಳು, ಆಟವಾಡಲಿ.

**ಪ್ರಶ್ನೆ VI ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. 4 ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**1) ಕೆಳಗಿನ ಪದದ ಸಂಧಿ ಹೆಸರಿಸಿರಿ**

c. ಗುಣ ಸಂಧಿ

**2) ಕೆಳಗಿ ಪದದ ಸಮಾಸ ಹೆಸರಿಸಿರಿ**

d ಬಹುವ್ರೀಹಿ ಸಮಾಸ

**3) ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿರಿ.**

a ರಾಮನಿಂದ ಹಣ್ಣು ತಿನ್ನಲ್ಪಟ್ಟಿತು

**4) ಕೆಳಗಿನ ಆಂಗ್ಲ ವಾಕ್ಯದ ಸರಿಯಾದ ಕನ್ನಡ ರೂಪಾಂತರ ಆರಿಸಿ ಬರೆಯಿರಿ.**

Self dependancy is verymuch needed to all; especially developing countries like India, it is a must.

a. ಸ್ವಾವಲಂಬನೆ ಎನ್ನುವುದು ಪ್ರತಿಯೊಬ್ಬರಿಗೂ ಅತಿ ಅಗತ್ಯವಾಗಿದೆ. ವಿಶೇಷತಃ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಂತಹ ಭಾರತ ದೇಶಕ್ಕೆ ಇದು ಇಂದಿನ ಅಗತ್ಯವಾಗಿದೆ.

## Section C

**ಪ್ರಶ್ನೆ VII. ಕೆಳಗಿನ ಪದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** 1 x 4 = 4

**1. ಕವಯಿತ್ರಿ ಏನನ್ನು ಕಾಣುತ್ತಿದ್ದಾರೆ?**

d. ಸತ್ತ ದನಗಳ ಕಿತ್ತು ತಿನ್ನುವುದನ್ನು.

**2. ಜನ, ದನಗಳಿಗೆ ಏನಿಲ್ಲ?**

d. ಜನ, ದನಗಳಿಗೆ ನೀರು, ಮೇವಿಲ್ಲ.

**3. ಕವಯಿತ್ರಿ ಮುಗಿಲತ್ತ ಕೈಚಾಚಿದ್ದೇಕೆ?**

b. ಅವರ ಸ್ಥಿತಿ ನೋಡಲಾಗದೆ

**4. ಕವಯಿತ್ರಿಯಲ್ಲಿ ಎಂತಹ ಛಲ ಮೂಡುತ್ತದೆ?**

c. ತಮ್ಮ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿಬಿಡುವ

**ಪ್ರಶ್ನೆ VIII. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 5 = 5**

1. **ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?**

   c. ಭಾಷೆಯನ್ನು

2. **ನಾವು ಯಾವ ಅಪಸ್ವರವನ್ನು ಕೇಳಿದ್ದೇವೆ?**

   c. ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕು

3. **ನೆರೆಹೊರೆಯವರು ಏನನ್ನು ಆಕ್ರಮಿಸಿಕೊಂಡು ಬಿಡುತ್ತಾರೆ?**

   b. ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು

4. **ಕನ್ನಡಿಗರಿಗೆ ಆಗುತ್ತಿರುವ  ಅನ್ಯಾಯವೇನು?**

   b. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ.

5. **ಕನ್ನಡಿಗರು ಅಲ್ಪಸಂಖ್ಯಾತರಾಗಲು ಕಾರಣವೇನು?**

   c. ಕನ್ನಡಿಗರ ಔದಾರ್ಯ ಧೋರಣೆ

**ಪ್ರಶ್ನೆ IX ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **1 x 5 = 5**

1. **ವಿಚಿತ್ರ ವಿದ್ಯಮಾನಗಳು ಎಲ್ಲಿ ನಡೆದವು?**

   c. ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ

2. **ಕೊಟ್ಟಿಗೆಯನ್ನು ಬೀಳಿಸಿದ್ದು ಯಾರು?**

   d. ಕೃಷ್ಣೇಗೌಡರ ಆನೆ

3. **ವಿಚಿತ್ರ ವಿದ್ಯಮಾನ ಯಾವುದು?**

   b. ಕೊಟ್ಟಿಗೆಯ ಮಾಡು  ಕುಸಿದು ಬಿದ್ದಿದ್ದು

4. **ಮೇಕೆಗಳು ಏಕೆ ಅರಚಲು ಶುರುಮಾಡಿದವು?**

   d. ಕೊಟ್ಟಿಗೆಯ ಮಾಡು  ಕುಸಿದು ಬಿದ್ದಿದ್ದರಿಂದ

5. **ಜನರು ಯಾರನ್ನು ನಿಂದಿಸತೊಡಗಿದರು?**

   a. ಕೃಷ್ಣೇಗೌಡರ ಆನೆಯನ್ನು.

## PART B   Section D

**ಪ್ರಶ್ನೆ X. ಕೆಳಗಿನವುಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **2 X 3 = 06**

**1) ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?**

ನಾವು ಬಯಸಿದ್ದು ತಕ್ಷಣ ಕೈಗೆ ಸಿಗಬೇಕು. ತಟ್ಟನೆ ಎಲ್ಲವೂ ಸರಿಹೋಗಬೇಕು. ಗಂಡನಾದವನು ಕೈತುಂಬ ಸಂಪಾದಿಸಬೇಕು. ಹೆಂಡತಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕಾದುದು ಗಂಡನ ಜವಾಬ್ದಾರಿ ಎಂಬುದು ಸೀತಾಳ ಬಯಕೆ, ನಂಬಿಕೆಗಳಾಗಿದ್ದವು.

**2) ದುರ್ಜನರ ಕಾರ್ಯ ಯಾವ ಬಗೆಯದು?**

ದುರ್ಜನರು ಇನ್ನೊಬ್ಬರಿಗೆ ಸ್ವಲ್ಪವೂ ಉಪಕಾರ ಮಾಡುವುದಿಲ್ಲ. ಹಾಗೆಂದು ನುಣ್ಣಗೆ, ತೋರಿಕೆಗೆ ಮಾತ್ರ ಚೆನ್ನಾಗಿ ಮಾತನಾಡುತ್ತಾರೆ. ಇಂಥವರು ಅನ್ನಕ್ಕಾಗಿ ಸೇರುವ ಕುನ್ನಿಗಳಂತೆ ಇರುತ್ತಾರೆ. ಇದು ದುರ್ಜನರ ಕಾರ್ಯದ ಬಗೆ.

**3) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?**

ವೇಲಾಯುಧ ದಿನದ ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ. ಇದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ತಲೆನೋವಾಗಿದ್ದ. ದುರ್ನಡತೆಗಾಗಿ ಅವನಿಗೆ ಛೀಮಾರಿ ಹಾಕಿ ಒಮ್ಮೆ ಓಡಿಸಿದರೂ ಆತ ತನ್ನ ನಡತೆ ಬದಲಿಸಿರಲಿಲ್ಲ. ಆದ್ದರಿಂದ ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾಗುತ್ತಿತ್ತು.

**ಪ್ರಶ್ನೆ XIಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **3 X 3 = 09**

**1)'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?**

ಪಾಠ : 'ಆಯ್ಕೆಯಿದೆ ನಮ್ಮ ಕೈಯಲ್ಲಿ'   ಲೇಖಕರು : ನೇಮಿಚಂದ್ರ.

ಸಂದರ್ಭ : ಲೇಖಕಿಯವರ ಪತಿ ಕೀರ್ತಿಯವರಿಗೆ ಒಮ್ಮೆ ಕೆಳಹೊಟ್ಟೆ ನೋವು ಕಾಣಿಸಿಕೊಂಡಿತು. ಆಗ ಕೆಲವರು ಅವರ ಖಾಯಿಲೆಯ ಬಗ್ಗೆ ಮಾತನಾಡುತ್ತ ಈ ಮಾತನ್ನು ಹೇಳಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕಿ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ವ್ಯಕ್ತಿಗೆ ಖಾಯಿಲೆ ಬಂದಾಗ ಮೊದಲು ಅದರ ಕಾರಣ ತಿಳಿದುಕೊಂಡು, ಅದಕ್ಕೆ ವೈದ್ಯರ ಬಳಿ ಸರಿಯಾದ ಚಿಕಿತ್ಸೆ ಕೊಡಿಸಬೇಕು. ಅದರ ಬದಲು ಅದೃಷ್ಟದ ಮೇಲೆ ಭಾರ ಹಾಕಿ ಮೂಢನಂಬಿಕೆಯಿಂದ ಕೈಕಟ್ಟಿ ಕುಳಿತರೆ ಬದುಕು ನಾಶವಾಗುತ್ತದೆ ಎಂಬುದು ಇದರ ಅರ್ಥವಾಗಿದೆ. ಜನರಲ್ಲಿ ವಸ್ತುಸ್ಥಿತಿ ಪರಿಜ್ಞಾನ ಮತ್ತು ವೈಚಾರಿಕತೆ ಇರಬೇಕು ಎಂಬುದನ್ನು ಇದು ಸೂಚಿಸುತ್ತದೆ.

**2) ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?**

ಪದ್ಯ : 'ಬಸವಣ್ಣನವರ ವಚನಗಳು' ಕವಿ : ಬಸವಣ್ಣ.

ಸಂದರ್ಭ : ಎಂಥವರ ಕೈಯಲ್ಲಿ ಏನಿದ್ದರೆ ನಿಷ್ಫಲವಾಗುತ್ತದೆ ಮತ್ತು ಒಂದು ವಸ್ತುವಿನ ಸಾರ್ಥಕತೆ ಯಾವಾಗ ಆಗುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಬಸವಣ್ಣನವರು ಈ ಮಾತನ್ನು ಹೇಳಿದ್ದಾರೆ.

ಅರ್ಥ : ಯಾರಿಗೆ ಯಾವುದರ ಬೆಲೆ ಗೊತ್ತಿರುವುದೋ ಅದು ಅವರ ಕೈಯಲ್ಲಿದ್ದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ಮಂಗನ ಕೈಗೆ ಮಾಣಿಕ್ಯ ಕೊಟ್ಟರೆ ಅದು ಅದನ್ನು ಮೂಸಿ ನೋಡಿ ಬಿಸಾಕುತ್ತದೆ. ಏಕೆಂದರೆ ಮಾಣಿಕ್ಯದ ಬೆಲೆ ಅದಕ್ಕೆ ಗೊತ್ತಿರುವುದಿಲ್ಲ. ಹಾಗೆಯೇ ಮನುಷ್ಯರ ಅಜ್ಞಾನವೂ ಕೂಡ ಇರುತ್ತದೆ ಎಂಬುದು ಇದರ ಅರ್ಥವಾಗಿದೆ.

**3) "ಆನೆಗೂ ಮಾನಮರ್ಯಾದೆ ಇರುತ್ತೆ ತಿಳುಕೋ"**

ಆಯ್ಕೆ : ದೀರ್ಘ ಗದ್ಯ : 'ಕೃಷ್ಣೇಗೌಡನ ಆನೆ' ಲೇಖಕರು : ಪೂರ್ಣಚಂದ್ರ ತೇಜಸ್ವಿ.

ಸಂದರ್ಭ : ಕೃಷ್ಣೇಗೌಡರ ಆನೆ ಒಮ್ಮೆ ರಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿಯನ್ನು ದೂಡಿ ಬೀಳಿಸಿತು. ಆಗ ರಹಮಾನ್ ಸಾಬಿಗೆ ಜನರು ಈ ಮಾತನ್ನು ಹೇಳಿದರು.

ವಿವರಣೆ : ಆನೆ ತನ್ನ ಅಂಗಡಿಯನ್ನು ಬೀಳಿಸಿದಾಗ ರಹಮಾನ್ ಅದಕ್ಕೆ ಸುಳ್ಳು ಕಾರಣ ಹೇಳಿದ. ಆಗ ಆತನ ಹೆಂಡತಿ ಆತ ಕೆಟ್ಟ ಶಬ್ದ ಬೈದಿದ್ದ ಎಂದು ಹೇಳಿದಳು. ಆಗ ಜನರು ಆನೆ ಮೂಕ ಪ್ರಾಣಿಯಾಗಿದ್ದರೂ ಅದಕ್ಕೂ ಮಾನ ಮರ್ಯಾದೆ ಇರುತ್ತದೆ ಎಂದು ಹೇಳಿದರು. ಪ್ರಾಣಿಗಳ ಕುರಿತು ಜನರಿಗಿರುವ ನಂಬಿಕೆಯನ್ನು ಇದು ತೋರಿಸಿಕೊಡುತ್ತದೆ.

**ಪ್ರಶ್ನೆ XII. ಕೆಳಗಿನ ಕವಿ/ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ.** 3 x 1 = 03

1. **ಪುಲಿಗೆರೆ ಸೋಮನಾಥ** : ಸುಮಾರು 16ನೆಯ ಶತಮಾನದಲ್ಲಿದ್ದ ವೀರಶೈವ ಕವಿ. 'ಸೋಮೇಶ್ವರ ಶತಕ' ಎಂಬ ಗ್ರಂಥದ ಕರ್ತೃ. ಧಾರವಾಡ ಜಿಲ್ಲೆಯಲ್ಲಿಯ ಪುಲಿಗೆರೆ ಈತನ ಜನ್ಮಸ್ಥಳವಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಈತನ ಶತಕಗಳ ಅಂಕಿತ 'ಹರಹರಾ ಸೋಮೇಶ್ವರಾ ಶ್ರೀ ಚೆನ್ನ ಸೋಮೇಶ್ವರಾ' ಮೊದಲ ಹಾಗೂ ಕೊನೆಯ ಪದ್ಯಗಳನ್ನು ಸ್ರಗ್ಧರಾ ವೃತ್ತದಲ್ಲಿ ರಚಿಸಿದ್ದು, ಉಳಿದವನ್ನು ಮತ್ತೇಭವಿಕ್ರೀಡಿತದಲ್ಲಿ ರಚಿಸಿದ್ದಾನೆ. ಈತನ ಶತಕದ ಪ್ರತಿಯೊಂದು ಪದ್ಯವೂ ಒಂದು ಮುಕ್ತಕ, ಸ್ವಯಂಪ್ರರ್ಣ ಭಾವವುಳ್ಳ ಸ್ವತಂತ್ರ ಪದ್ಯಗಳಾಗಿವೆ. ಲವಲವಿಕೆಯ ಶೈಲಿ, ಉಪಮೆಗಳ ಸೊಗಸಿನಿಂದಾಗಿ ಸೋಮೇಶ್ವರ ಶತಕ ಕನ್ನಡಿಗರ ಮನ ಗೆದ್ದಿದೆ.

2. **ಮುದ್ದಣ** : 'ಮುದ್ದಣ' ಎಂಬುದು ಲಕ್ಷ್ಮೀನಾರಾಯಣಪ್ಪ ಎಂಬ ಕವಿಯ ಕಾವ್ಯನಾಮ. ಉಡುಪಿ ಜಿಲ್ಲೆಯ ನಂದಳಿಕೆ ಎಂಬ ಗ್ರಾಮ ಈತನ ಹುಟ್ಟೂರು. ಪಾತಾಳಿ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ಈತನ ತಂದೆತಾಯಿಗಳು. ಬಡತನ ಮತ್ತು ಕ್ಷಯರೋಗಕ್ಕೆ ತುತ್ತಾಗಿ ಚಿಕ್ಕವಯಸ್ಸಿನಲ್ಲೇ ತೀರಿಕೊಂಡ ಮುದ್ದಣ ಉಡುಪಿಯ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿಯೂ, ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿಯೂ ಕೆಲಸ ನಿರ್ವಹಿಸಿದ್ದನು. 'ಅದ್ಭುತ ರಾಮಾಯಣ', 'ಶ್ರೀರಾಮ ಪಟ್ಟಾಭಿಷೇಕ', 'ರಾಮಾಶ್ವಮೇಧ' ಮುಂತಾದ ಕೃತಿಗಳನ್ನು ಈತ ರಚಿಸಿರುವನು. 'ರತ್ನಾವತೀ ಕಲ್ಯಾಣ', 'ಕುಮಾರ ವಿಜಯ' ಎಂಬ ಎರಡು ಯಕ್ಷಗಾನ ಕೃತಿ ರಚಿಸಿದ್ದಾನೆ. ವಾಲ್ಮೀಕಿ ರಾಮಾಯಣ ಮತ್ತು ಭಗವದ್ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. 'ಗೋದಾವರಿ' ಎಂಬ ಅಪೂರ್ಣ ಕಾದಂಬರಿಯನ್ನು ಈತ ರಚಿಸಿದ್ದನು.

3. **ಡಾ. ಹಾ. ಮಾ. ನಾಯಕ** : ಹಾಮಾನಾ ಎಂದೇ ಪ್ರಸಿದ್ಧರಾಗಿರುವ ಡಾ. ಹಾರೋಗದ್ದೆ ಮಾನಪ್ಪ ನಾಯಕ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೋಗದ್ದೆಯವರು. ಶ್ರೀನಿವಾಸ ನಾಯಕ–ರುಕ್ಮಿಣಿಯಮ್ಮ ದಂಪತಿಗಳ ಸುಪುತ್ರರು. ಮೈಸೂರು ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲಬರ್ಗಾ ವಿ.ವಿ.ಯ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಕನ್ನಡದ ಕಟ್ಟಾಳು' ಎಂದೇ ತಮ್ಮನ್ನು ಗುರುತಿಸಿಕೊಂಡಿದ್ದರು. ತಮ್ಮ 'ಸಂಪ್ರತಿ' ಎಂಬ ಪತ್ರಿಕಾ ಅಂಕಣ ಬರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. 57ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬಾಳ್ನೋಟಗಳು, ಸಂಪ್ರತಿ, ಸಲ್ಲಾಪ, ಸಂಭ್ರಮ, ಸೂಲಂಗಿ, ಸಂಪಣ, ಭಾರತದ ಧರ್ಮ, ರವೀಂದ್ರನಾಥ ಠಾಕೂರ್, ಸಂಗತಿ, ನಮ್ಮ ಮನೆಯ ದೀಪ ಮುಂತಾದ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

**ಪ್ರಶ್ನೆ XIII ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.** 4 x 3 = 12

**1.ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?**

ಕಳೆದು ಹೋಗಿದ್ದ ಬೆಳ್ಳಿಲೋಟ ಹೂಳು ತುಂಬಿದ ಮಣ್ಣಿನಲ್ಲಿ ಮತ್ತೆ ಸಿಕ್ಕಿತು. ಆದರೆ ಬೆಳ್ಳಿಲೋಟ ಕಳವಿನ ಅಪವಾದವನ್ನು ಕುದುಪನ ಮೇಲೆ ಹೊರಿಸಲಾಗಿತ್ತು. ಅದಕ್ಕಾಗಿ ಧಣಿ ಕುದುಪನ ಮನೆಯವರನ್ನೆಲ್ಲ ಹಂಗಿಸುತ್ತಿದ್ದರು. ಅದೇ ಕಾರಣಕ್ಕಾಗಿ ಅವರನ್ನೆಲ್ಲ ಇನ್ನಷ್ಟು ಕೀಳಾಗಿ ಕಾಣುತ್ತಿದ್ದರು. ಅದಕ್ಕಾಗಿ ಧಣಿಗಳು ಕುದುಪನ ಮಗನನ್ನು ಮರಕ್ಕೆ ಕಟ್ಟಿ ಹೊಡೆದಿದ್ದರು. ಆದರೆ ಈಗ ಅದು ಧಣಿಗಳ ಎದುರೇ ಹೊಳೆಯ ಹೂಳು ತೆಗೆಯುವಾಗ ಮತ್ತೆ ಸಿಕ್ಕಿತು. ಆಗ ಕುದುಪ ಮತ್ತು ಚೆನ್ನಮ್ಮ ಧಣಿಗಳನ್ನು ತಿರಸ್ಕಾರದಿಂದ ನೋಡತೊಡಗಿದರು. ಈ ಎಲ್ಲ ಹಿನ್ನೆಲೆಯಲ್ಲಿ ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಯಿತು.

**ಅಥವಾ**

**ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಹೇಗೆ? ವಿವರಿಸಿರಿ.**

ಕಲಾಂ ಅವರು ಶೀಘ್ರದಲ್ಲಿಯೇ ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವವರಿದ್ದರು. ಅದಕ್ಕೆ ಕೆಲವೇ ದಿನಗಳ ಮೊದಲು ಕಲಾಂ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮೆದುಳಿನಲ್ಲಿ ಅಗತ್ಯ ಮಾಹಿತಿಗಳನ್ನು ನೀಡುವ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೇ ಎಂದು ಅವರು ವೈದ್ಯರನ್ನು ಪ್ರಶ್ನಿಸಿದರು. ಅದನ್ನು ಅಳವಡಿಸಿ ಬುದ್ಧಿಮಾಂದ್ಯತೆಯನ್ನು ನಿವಾರಿಸಬಹುದೆ ಎಂದು ಕೇಳಿದರು. ವೈದ್ಯರು

ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಆಗ ಕಲಾಂ ಅವರು ‘‘ಸಾಧ್ಯವಿಲ್ಲ ಎ೦ದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ ಹೇಳಬಲ್ಲಿರಾ?’’ ಎಂದು ಕೇಳಿದರು. ಈ ಘಟನೆಯಿಂದ ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಎಂದು ಹೇಳಬಹುದು.

**2. ಯಾವ-ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?**

ಬೇವು ಚಿಗುರಾಗಿದ್ದರೂ ಕಹಿಯೇ ಆಗಿರುತ್ತದೆ. ಇದು ಇನ್ನೂ ಚಿಗುರು ಎಂದು ಅಲಕ್ಷಿಸಲಾದೀತೆ? ಚೇಳು ಚಿಕ್ಕದು ಎಂದು ಮೈಮೇಲೆ ಹಾಕಿಕೊಂಡರೆ ಅದು ಕಚ್ಚದೆ ಬಿಡುವುದೆ? ಹಾಲನ್ನು ಕೊಟ್ಟು ಸಾಕಿದರೆ ಹಾವು ವಿಷ ಕಕ್ಕುವುದಿಲ್ಲವೇ? ಗಿಳಿಯನ್ನು ಸಾಕುವೆನೆಂದು ಗೂಬೆ ಮರಿಯನ್ನು ತಂದು ಸಾಕಿದರೆ ಅದು ಎಂದಿಗಾದರೂ ಗಿಳಿಯಾದೀತೇ? ವೈರಿ ಹೇಗಿದ್ದರೂ ವೈರಿಯೇ. ಆತ ಬಾಲಕನಾಗಿದ್ದರೂ ವೈರಿಯೇ ಎಂಬುದನ್ನು ಮರೆಯಬಾರದು. ಬದುಕಿನಲ್ಲಿ ಈ ಎಲ್ಲ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.

**ಅಥವಾ**

**ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.**

ಶಿಲುಬೆಗೇರಿಸಿದರೂ ಏಸುವಿನ ಮುಖದಲ್ಲಿ ಕ್ಷಮಾ ಭಾವವೇ ಮೂರ್ತಿವೆತ್ತಂತೆ ತೋರುತ್ತಿದೆ. ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ, ದೇವರು ನಿಮ್ಮನ್ನು ಕ್ಷಮಿಸಲಿ. ನನ್ನ ಎಡಕ್ಕೊಬ್ಬ, ಬಲಕ್ಕೊಬ್ಬನನ್ನು ತೂಗಿ ಹಾಕಿದ್ದೀರಿ. ನೀವೆಂತಹ ತಪ್ಪನ್ನು ಮಾಡುತ್ತಿದ್ದೀರಿ ಎಂಬ ಕಲ್ಪನೆಯೂ ನಿಮಗಿದ್ದಂತಿಲ್ಲ. ನಿಮ್ಮೆಲ್ಲರನ್ನೂ, ನಿಮ್ಮೆಲ್ಲರ ತಪ್ಪುಗಳನ್ನೂ ಆ ದೇವರು ಮನ್ನಿಸಲಿ. ನೀವು ಬಡಿದ ಸುತ್ತಿಗೆಗಳು, ಮಕುಟ ಹೆಣೆದ ಮುಳ್ಳುಗಳು ಸತ್ಯವಲ್ಲ. ಹಬ್ಬಿಸಿದ ಸುಳ್ಳುಗಳು ಕಾಲದೊಳಗಿನ್ನೂ ಸೇರಿಲ್ಲ. ವೇಷ ಮರೆಸಿವೆ ಅಷ್ಟೆ. ನೀವು ಬಗೆದ ಕೇಡು ಇತ್ಯಾದಿಗಳೆಲ್ಲ ಎಂದಿಗೂ ಶಾಶ್ವತವಲ್ಲ. ದೇವರೇ, ಇವರನ್ನೆಲ್ಲ ಕ್ಷಮಿಸಿಬಿಡು ಎಂದು ಶಿಲುಬೆಗೇರಿದ ಜೀಸಸ್‌ನ ದೇಹ ಹೇಳುವಂತಿದೆ.

**3. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.**

ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯತೊಡಗಿದರು. ಆ ಕೊಡಲಿ ತೆಗೆದುಕೊಂಡು ಕಲ್ಲು ಮಣ್ಣು ನೋಡದೆ ಯರ್‍ರಾಬಿರ್‍ರಿ ಜಪ್ಪಿದ್ದರು. ಹೀಗಾಗಿ ಅದರ ಹಿಂಭಾಗ ಯಾವುದು ಮುಂಭಾಗ ಯಾವುದು ಎಂದು ಗೊತ್ತಾಗುತ್ತಿರಲಿಲ್ಲ. ಅದು ಹೇಳಲಾಗದಷ್ಟು ಹಾಳಾಗಿತ್ತು. ಎಲ್ಲ ಕಡೆ ಜಜ್ಜಿ ಹೋಗಿ ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು. ಅದು ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡುಬಿಟ್ಟಿತ್ತು. ಈಗ ಅದು ಅಮೂಲ್ಯವಾದುದೇನೂ ಆಗಿರಲಿಲ್ಲ. ಆದ್ದರಿಂದ ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲ.

**ಅಥವಾ**

**ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?**

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಕೃಷ್ಣೇಗೌಡರ ಬಳಿಯಿದ್ದ ಆನೆ. ಅದು ಹುಟ್ಟಿದ್ದು, ಬೆಳೆದಿದ್ದು ಎಲ್ಲ ಊರಿನಲ್ಲಿ, ಜನಗಳ ನಡುವೆಯೇ. ಅದು ಮೂಡಿಗೆರೆಯ ಪೇಟೆಗೆ ಎಷ್ಟು ಒಗ್ಗಿಕೊಂಡಿತ್ತೆಂದರೆ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆಗೊನೆಗಳ ದಿಂಡುಗಳನ್ನೂ, ಸಿಪ್ಪೆಗಳನ್ನೂ, ಜಜ್ಜಿದ, ಹಾಳಾದ ಹಣ್ಣುಗಳನ್ನೂ ಅದಕ್ಕೆ ಕೊಡಲು ಇಡುತ್ತಿದ್ದರು. ಅದು ಖಾಯಮ್ಮಾಗಿ ಎಲ್ಲ ಅಂಗಡಿಗಳ ಬಳಿಗೂ ಹೋಗಿ ಅದನ್ನೆಲ್ಲ ತಿನ್ನುತ್ತಿತ್ತು. ಹಾಗೆ ಬೇಕಾಬಿಟ್ಟಿಯಾಗಿ ಬೆಳೆದು ಸಾಕಷ್ಟು ಕೊಬ್ಬಿತ್ತು. ಇದು ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಮತ್ತು ಪೇಟೆಯಲ್ಲಿ ಮಾಡುತ್ತಿದ್ದ ಕೆಲಸವಾಗಿದೆ.

**ಪ್ರಶ್ನೆ XIV ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150-200 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **5 X 1 = 05**

ಇದಕ್ಕೆ ಅಂಕ ನೀಡಿಕೆ ಹೀಗಿದೆ : ಪೀಠಿಕೆ-1, ವಿಷಯ ವಸ್ತುವಿಗೆ- 2, ಭಾಷಾಶೈಲಿ-1, ಉಪಸಂಹಾರ-1.

**ಪ್ರಶ್ನೆ XV. ಕನ್ನಡ ನಾಡು-ನುಡಿಯನ್ನು ಅಭಿವೃದ್ಧಿಗೊಳಿಸುವ ಕುರಿತು ನಿಮ್ಮ ಗೆಳೆಯನಿಗೆ ಒಂದು ಪತ್ರ ಬರೆಯಿರಿ** **5 X 1 = 05**

ವೈಯಕ್ತಿಕ ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ-1, ಪ್ರೀತಿಯ ಗೆಳೆಯನಿಗೆ ಇತ್ಯಾದಿ ಆರಂಭಕ್ಕೆ -1, ಪತ್ರದ ಒಡಲು-2, ಮುಕ್ತಾಯ, ಸಹಿ-1.

**ಅಥವಾ**

ನಿಮ್ಮ ಊರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಕೋರಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.

ವ್ಯಾವಹಾರಿಕ ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ-1, ಮಾನ್ಯರೇ, ವಿಷಯ-1, ಪತ್ರದ ಒಡಲು-2, ಮುಕ್ತಾಯ, ಸಹಿ-1.

****************